# ಹಂಪಿ ಟೈಮ್ಸ್
HAMPI TIMES
ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA
Email: hampitimes@gmail.com | M:94486 33038



ಇಂದು ಹಾಗೂ ಹಿಂದಿನ ಹಂಪಿ ಟೈಮ್ಸ್ ಕಲರ್‌ಫುಲ್ ಇ-ದಿನಪತ್ರಿಕೆ ಓದಲು QR ಕೋಡ್ ಸ್ಕ್ಯಾನ್ ಮಾಡಿ ಓದಿರಿ



No.1 Leading in Local News Paper
80,000
HAMPI TIMES E-PAPER READERS
94486 33038
NEWS PAPER ADD - THE BEST ADVERTISING PLATFORM TO BOOST YOUR BUSINESS
E-mail: hampitimes@gmail.com | # Valmiki Circle hospet-583201



ಸಂಪುಟ:02 • ಸಂಚಿಕೆ: 47 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 14.08.2024 • ಬುಧವಾರ • ಪುಟ:04 • ಬೆಲೆ:2
Volume:02 • Issue: 47 • PRGI No:KARKAN/2023/88055 • VIJAYANAGARA • 14.08.2024 • Wednesday • Page:04 • Rs:2





ಹೊಸಪೇಟೆ ಹೊರವಲಯದ ಶ್ರೀ ಶನೇಶ್ವರ ದೇವಸ್ಥಾನದಲ್ಲಿ ದಿನಾಂಕ 17-08-2024 ರಂದು ಶ್ರಾವಣ ಶುದ್ಧ ತ್ರಯೋದಶಿ ಶನಿವಾರದಂದು


ಶ್ರೀ ಶನಿದೇವರ ಪ್ರತಿಷ್ಠಾಪಿಸಿದ 27ನೇ ವಾರ್ಷಿಕೋತ್ಸವ ಸಮಾರಂಭ

ಆ.16 ರಾತ್ರಿ ಪುರಾಣ ಪ್ರವಚನ | ಆ.17ರ ಬೆಳಿಗ್ಗೆ ಗಂಗಾಪೂಜೆ ಶನಿದೇವರಿಗೆ ತೈಲಾಭಿಷೇಕ, ಫಲ-ಪಂಚಾಮೃತ ಅಭಿಷೇಕ, ವಿಶೇಷ ಪುಷ್ಪಲಂಕಾರ

ಧರ್ಮ ಸಭೆ ಬೆಳಗ್ಗೆ 11-00 ಗಂಟೆಗೆ, ಸಾನ್ನಿಧ್ಯ ಶ್ರೀಮನ್ ಉಜ್ಜಯಿನಿ ಸದ್ಧರ್ಮ ಸಿಂಹಸನಾಧೀಶ್ವರ ಶ್ರೀಶ್ರೀಶ್ರೀ 1008 ಜಗದ್ಗುರು ಸಿದ್ಧಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳು

ನೇತೃತ್ವ: ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನ ಮಠದ ಶ್ರೀಮನ್.ನಿ.ಪ್ರ.ಜಗದ್ಗರು ಕೊಟ್ಟೂರು ಬಸವಲಿಂಗ ಮಹಾಸ್ವಾಮಿಗಳು

ಸರ್ವರಿಗೂ ಸ್ವಾಗತ ಕೋರುವವರು: ಶ್ರೀ ಶನೇಶ್ವರ ದೇವಸ್ಥಾನ ಸಮಿತಿ (ರಿ), ಪಂಚಾಚಾರ್ಯನಗರ, ರಾಷ್ಟ್ರೀಯ ಹೆದ್ದಾರಿ 50, ಹೊಸಪೇಟೆ, ವಿಜಯನಗರ ಜಿಲ್ಲೆ




# ಮೊದಲ ಬೆಳೆಗೆ ನೀರು ಕೊಡ್ತಿವಿ ಚಿಂತಿಸಬೇಡಿ: ಸಿಎಂ
# ನವಲಿ ಜಲಾಶಯ ನಿರ್ಮಾಣಕ್ಕೆ ಡಿಪಿಆರ್ ಸಿದ್ಧ ಒಪ್ಪಿಗೆ ಬಾಕಿ

## 50 ವರ್ಷಕ್ಕೆ ಚೈನ್ ಬದಲಿಸಬೇಕಿತ್ತು | 70 ವರ್ಷ ವಯಸ್ಸಾಗಿದೆ | ಮೂರು ರಾಜ್ಯಗಳ ರೈತರು ಆತಂಕಪಡಬೇಡಿ
## ತುಂಗಭದ್ರಾ ಜಲಾಶಯ ಮತ್ತೆ ತುಂಬುತ್ತೆ | ಬಾಗಿನ ಅರ್ಪಿಸೋಕೆ ಬರ್ತೀನಿ: ಸಿಎಂ ಸಿದ್ದರಾಮಯ್ಯ ಆತ್ಮವಿಶ್ವಾಸ

**ಹಂಪಿ ಟೈಮ್ಸ್ ಹೊಸಪೇಟೆ**

ತುಂಗಭದ್ರಾ ಜಲಾಶಯ ಗೇಟ್‌ನ ದುರಸ್ತಿಯನ್ನು ತ್ವರಿತವಾಗಿ ಮುಗಿಸಲು ಸಂಬಂಧಪಟ್ಟವರಿಗೆ ಸೂಚಿಸಲಾಗಿದ್ದು, ರೈತರು ಆತಂಕಪಡುವ ಅಗತ್ಯವಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳೀದರು. ತುಂಗಭದ್ರಾ ಜಲಾಶಯ 19ನೇ ಕ್ರಸ್ಟ್‌ಗೇಟ್ ಮುರಿದಿರುವ ಸ್ಥಳವನ್ನು ಪರಿಶೀಲನೆ ನಡೆಸಿದ ನಂತರ ಮಾಧ್ಯಮದವರೊಂದಿಗೆ ಮಂಗಳವಾರ ಮಾತನಾಡಿದರು.

ಆಗಸ್ಟ್ 10ರಂದು ರಾತ್ರಿ 10.50 ಗಂಟೆ ಸಮಯದಲ್ಲಿ ತುಂಗಭದ್ರಾ ಜಲಾಶಯದ 10 ಗೇಟ್‌ಗಳಿಂದ ಸುಮಾರು 22,890 ಕ್ಯೂಸೆಕ್ಸ್ ನೀರನ್ನು ಹೊರಬಿಡುವ ಸಮಯದಲ್ಲಿ 19ನೇ ಗೇಟು ಏಕಾಏಕಿ ಕೊಚ್ಚಿ ಹೋಗಿರುತ್ತದೆ. ಪ್ರಸ್ತುತ ಒಳಹರಿವು ಸರಾಸರಿ 25,500 ಕ್ಯೂಸೆಕ್ಸ್‌ಯಿದ್ದು, ಡ್ಯಾಮೇಜ್ ಗೇಟ್ ಒಳಗೊಂಡಂತೆ ಇತರೆ ಗೇಟ್‌ಗಳಿಂದ ಸುಮಾರು 1,25,000 ರಿಂದ 1,40,000 ಕ್ಯೂಸೆಕ್ಸ್ ವರೆಗೆ ನೀರು ಹೊರಬಿಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಈ ಗೇಟ್‌ನ್ನು ಆಣೆಕಟ್ಟು ಗೇಟುಗಳ ವಿನ್ಯಾಸ ತಜ್ಞರಾದ ಕನ್ನಯ್ಯ ನಾಯ್ಡು ಹೈದ್ರಾಬಾದ್ ಇವರಿಂದ ತಾತ್ಕಾಲಿಕ ಸ್ಟಾಫ್‌ಲಾಗ್ ಗೇಟ್‌ನ ವಿನ್ಯಾಸ ಪಡೆದು ನಿರ್ಮಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಕನ್ನಯ್ಯ ನಾಯ್ಡು ಅವರು ತಾತ್ಕಾಲಿಕವಾಗಿ 1.2 ಮೀಟರ್ (4 ಅಡಿ) ಎತ್ತರದ ಎಲಿಮೆಂಟ್‌ಗಳನ್ನು ತಯಾರಿಸಲು ವಿನ್ಯಾಸ ನೀಡಿರುತ್ತಾರೆ.

ಹಂತ ಹಂತವಾಗಿ ಸಂಗ್ರಹವಾದ ನೀರನ್ನು 1625 ಅಡಿಗೆ ಕಡಿಮೆ ಮಾಡಿ ಒಂದು ಎಲಿಮೆಂಟ್ ಸ್ಟಾಫ್‌ಲಾಗ್ ಗೇಟ್‌ನ್ನು ತಯಾರಿಸಿ ಅಳವಡಿಸಲು >>3





### ತುಂಗಭದ್ರಾ ಮಂಡಳಿ ಅಧಿಕಾರಿಗಳ ನಡೆ ವಿರುದ್ಧ ಪತ್ರಕರ್ತರು ಆಕ್ರೋಶ





ಸಿಎಂ ಸಿದ್ದರಾಮಯ್ಯನವರು ಟಿಬಿ ಡ್ಯಾಂ ಗೇಟ್ ಪರಿಶೀಲನೆ ನಂತರ ಸ್ಥಳದಲ್ಲೇ ಮಾಧ್ಯಮದವರೊಂದಿಗೆ ಮಾತನಾಡುತ್ತಾರೆ ಎಂಬ ವಿಷಯ ಟಿಬಿ ಮಂಡಳಿ ಅಧಿಕಾರಿಗಳಿಗೆ ಗೊತ್ತಿದ್ದರೂ, ಪತ್ರಕರ್ತರಿಗೆ ಕನಿಷ್ಠ ನೆರಳಿನ ವ್ಯವಸ್ಥೆಯನ್ನೂ ಮಾಡದೆ, ಅಧಿಕಾರಿಗಳಿಗಷ್ಟೇ ಶ್ಯಾಮಿಯಾನ ಹಾಕಿಸಿಕೊಂಡು ತಾರತಮ್ಯ ಎಸಗಿದ್ದಕ್ಕೆ ಪತ್ರಕರ್ತರು ಬಿಸಿಲಿನ ತಾಪಮಾನ ತಾಳಲಾರದೆ ತಲೆಮೇಲೆ ಕುರ್ಚಿಗಳಿಟ್ಟುಕೊಂಡು ಅಧಿಕಾರಿಗಳ ವಿರುದ್ಧ ಅಕ್ರೋಶ ವ್ಯಕ್ತಪಡಿಸಿದರು. ಎರಡು ತಾಸಿಗೂ ಅಧಿಕ ತುಂಗಭದ್ರಾ ಜಲಾಶಯದ ಕ್ರಸ್ಟ್‌ಗೇಟಗಳ ಮುಂದಿನ ರಸ್ತೆಯಲ್ಲೇ ಸುಡು ಬಿಸಿಲಿನಲ್ಲಿ ಕಾದು ಕುಳಿತು ಜನರಿಗೆ ಸುದ್ದಿ ರವಾನಿಸಿದರು. ಕ್ಯಾಮರಗಳು, ಮೊಬೈಲ್‌ಗಳಿಗೆ ಕರವಸ್ತ್ರ ಹಾಕಿ ತಾಪಮಾನದಿಂದ ರಕ್ಷಿಸಿಕೊಳ್ಳಲು ಪರದಾಡಿದರು. ಸುದ್ದಿ ಮಾಡೋರ ಸಂಕಷ್ಟ ಕೇಳೋರಿಲ್ಲದಂತಾಗಿದೆ ಎಂದು ಪತ್ರಕರ್ತರು ಬೇಸರ ವ್ಯಕ್ತಪಡಿಸಿದರು.

### ಜಲಾಶಯ ಮತ್ತೆ ತುಂಬಲಿದೆ

ಆಗಸ್ಟ್ 17 ರಿಂದ ರಾಜ್ಯದಲ್ಲಿ ಹೆಚ್ಚಿನ ಮಳೆ ನಿರೀಕ್ಷೆ ಇದೆ. ತುಂಗಭದ್ರಾ ಜಲಾಶಯ ಮತ್ತೆ ತುಂಬುವ ವಿಶ್ವಾಸವಿದ್ದು, ಬಾಗಿನ ಅರ್ಪಿಸಲು ನಾನು ಮತ್ತೊಮ್ಮೆ ಬರುತ್ತೇನೆ. ಕರ್ನಾಟಕದಲ್ಲಿ ಸುಮಾರು 9 ಲಕ್ಷ ಹಾಗೂ ಆಂಧ್ರ ತೆಲಂಗಾಣಗಳಲ್ಲಿ ಸುಮಾರು 3 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾಕಿರುವ ರೈತರಿಗೆ ಯಾವುದೇ ತೊಂದರೆಯಾಗುವುದಿಲ್ಲ. ನಾನು ರೈತರ ಪರನಿದ್ದೇನೆ. ಬೆಳೆಗಳಿಗೆ ತೊಂದರೆ ಆಗಲು ಬಿಡಲ್ಲ ನಮ್ಮ ರೈತರು ಬೇರೆಯಲ್ಲ, ನೆರೆ ರಾಜ್ಯದ ರೈತರು ಬೇರೆಯಲ್ಲ. ರೈತರಿಗೆ ತೊಂದರೆಯಾಗದಂತೆ ಕ್ರಮ ಕೈಗೊಳ್ಳಲಾಗುವುದು ಎಂದು ಸ್ಥಳದಲ್ಲಿ ಉಪಸ್ಥಿತರಿದ್ದ ಆಂಧ್ರ, ತೆಲಂಗಾಣ ರಾಜ್ಯಗಳ ಕೃಷಿ ಸಚಿವರಿಗೆ ಸಿಎಂ ಭರವಸೆ ನೀಡಿದರು.

### ಒಪ್ಪಿಗೆ ನಂತರ ನವಲಿ ಜಲಾಶಯ ಕಾಮಗಾರಿ ಪ್ರಾರಂಭ

**ನವಲಿ ಜಲಾಶಯ ನಿರ್ಮಾಣಕ್ಕೆ 15 ಸಾವಿರ ಕೋಟಿ ರೂ.ಗಳ ಡಿಪಿಆರ್ ತಯಾರಾಗಿದ್ದು, ಇದು ಅಂತರರಾಜ್ಯ ಯೋಜನೆಯಾಗಿದೆ. ಡಿಪಿಆರ್‌ಗೆ ಒಪ್ಪಿಗೆ ದೊರೆತ ನಂತರ ಕಾಮಗಾರಿ ಪ್ರಾರಂಭಿಸಲಾಗುವುದು ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದರು.**


ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
Place your ads here
reach more readers
No.1 ನಂಬರ್ ದಿನಪತ್ರಿಕೆ
Why Choose Us?
- Experienced Professionals
- Fast and Reliable Service
- Customized Solutions
- Competitive Pricing

E-mail: hampitimes@gmail.com
www.hampitimes.com
epaper.hampitimes.com
9448633038


## ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್ ಹೆಸರು ನೋಂದಾಯಿಸಲು ಸೂಚನೆ

**ಹಂಪಿ ಟೈಮ್ಸ್ ಹೊಸಪೇಟೆ**

ಹೊಸಪೇಟೆ ನಗರದ ನಗರಸಭೆ ವ್ಯಾಪ್ತಿಯಲ್ಲಿ ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್‌ಗಳ ಸಮೀಕ್ಷೆ ನಡೆಸಲಾಗುತ್ತದೆ.

ದಿ ಪ್ರೊಹಿಬಿಷನ್ ಆಫ್ ಎಪ್ಲಾಯ್‌ಮೆಂಟ್ ಆ್ಯಸ್ ಮ್ಯಾನ್ಯುವಲ್ ಸ್ಕ್ಯಾವೆಂಜರ್ಸ್ ಆ್ಯಂಡ್ ದೇರ್ ರಿಹಬಿಲಿಟೇಷನ್ ಆ್ಯಕ್ಟ್ 2013 ರ ಸೆಕ್ಷನ್ 2(1)(ಜಿ) ರಲ್ಲಿ ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್‌ಗಳ ಕುರಿತು ವಾಖ್ಯಾನಿಸಿರುವಂತೆ ಒಣ ಶೌಚಾಲಯಗಳನ್ನು ಸ್ವಚ್ಛಗೊಳಿಸುವುದು, ಅನೈರ್ಮಲ್ಯ ಶೌಚಾಲಯಗಳಿಂದ ಹೊರ ಹೋಗಿ ತೆರೆದ ಚರಂಡಿಯಲ್ಲಿ ಸಂಗ್ರಹವಾಗುವ ಮಾನವ ಮಲವನ್ನು ಸ್ವಚ್ಛಗೊಳಿಸುವುದು, ಶೌಚಾಲಯದ ಮಲಗುಂಡಿಗಳನ್ನು ದೈಹಿಕವಾಗಿ ಸ್ವಚ್ಛಗೊಳಿಸುವಂತಹ ಮ್ಯಾನುವಲ್ ಸ್ಕ್ಯಾವೆಂಜಿಂಗ್ ಕಾರ್ಯದಲ್ಲಿ ದೈಹಿಕವಾಗಿ ತೊಡಗಿರುವ ವ್ಯಕ್ತಿಗಳು ಇದ್ದಲ್ಲಿ, ಹೊಸಪೇಟೆ ನಗರಸಭೆ ಕಾರ್ಯಾಲಯಕ್ಕೆ ದಾಖಲೆಗಳೊಂದಿಗೆ ಹೆಸರನ್ನು ಆಗಸ್ಟ್ 15ರೊಳಗೆ ನೋಂದಾಯಿಸಬಹುದಾಗಿದೆ ಎಂದು ನಗರಸಭೆ ಪೌರಾಯುಕ್ತರು ತಿಳಿಸಿದ್ದಾರೆ.

**ನೋಂದಣಿ ಮಾಡಿಸಲು ಸಲ್ಲಿಸಬೇಕಾದ ದಾಖಲೆಗಳು:** ಪಾಸ್ ಪೋರ್ಟ್ ಅಳತೆಯ ಒಂದು ಭಾವಚಿತ್ರ, ಕುಟುಂಬದ ಸದಸ್ಯರುಗಳನ್ನು ಒಳಗೊಂಡ ಒಂದು ಭಾವಚಿತ್ರ, (ಅಳತೆ 6+4), ಬ್ಯಾಂಕ್ ಖಾತೆಯ ಪಾಸ್‌ಬುಕ್‌ನ ಮುಖ ಪುಟದ ಪ್ರತಿ (ಮೂಲ ಪುಸ್ತಕವನ್ನು ಸಹ ತರುವುದು), ಆಧಾರ್ ಪ್ರತಿ (ಮೂಲ ಪ್ರತಿಯನ್ನು ಸಹ ತರುವುದು) ಮತ್ತು ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್ ಕಾರ್ಯನಿರ್ವಹಿಸುತ್ತಿರುವ ಅನೈರ್ಮಲ್ಯ ಶೌಚಾಲಯ ಸ್ಥಳದ ವಿವರ ದಾಖಲೆಗಳನ್ನು ಸಲ್ಲಿಸಲು ತಿಳಿಸಲಾಗಿದೆ.

## ಶಿಶಿಕ್ಷು ತರಬೇತಿಗಾಗಿ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ಹೊಸಪೇಟೆ ವಿಭಾಗದ ವ್ಯಾಪ್ತಿಗೆ ಬರುವ ವಿಭಾಗೀಯ ಕಾರ್ಯಾಗಾರ, ಹೊಸಪೇಟೆ, ಕೂಡ್ಲಿಗಿ, ಹಡಗಲಿ, ಹೆಚ್.ಬಿ.ಹಳ್ಳಿ. ಮತ್ತು ಹರಪನಹಳ್ಳಿ ಘಟಕಗಳಲ್ಲಿ ಆಟೋ ಎಲೆಕ್ಟ್ರೀಷಿಯನ್, ಡಿಸಲ್ ಮೆಕ್ಯಾನಿಕ್, ಆಟೋ ವೆಲ್ಡರ್, ಆಟೋ ಬಾಡಿ ಬಿಲ್ಡರ್, ಶೀಟ್ ಮೆಟಲ್ ವರ್ಕ್ಸ್ (ಎಂ.ಎಂ.ವಿ) ವೃತ್ತಿಯಲ್ಲಿ ಅರ್ಹ ಅಭ್ಯರ್ಥಿಗಳಿಂದ ಒಂದು ವರ್ಷದ ಶಿಶಿಕ್ಷು ತರಬೇತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ಅಭ್ಯರ್ಥಿಗಳು www.apprenticeshipindia.gov.in ನಲ್ಲಿ ನೋಂದಣಿ ಮಾಡಿಕೊಂಡು ಸದರಿ ಪೋರ್ಟಲ್‌ನಿಂದ ಡಿವಿಜಿನಲ್ ಕಂಟ್ರೋಲರ್, ಕೆಕೆಆರ್‌ಟಿಸಿ ಹೊಸಪೇಟೆ ಡಿವಿಜನ್ (ಇ03232900221) ಈ ವಿಳಾಸಕ್ಕೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿ ವಿಭಾಗೀಯ ಕಚೇರಿ, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ಹೊಸಪೇಟೆ ವಿಭಾಗದಲ್ಲಿ ಆಗಸ್ಟ್ 23ರಂದು ಬೆಳಿಗ್ಗೆ 11 ಗಂಟೆಗೆ ಕಚೇರಿ ವೇಳೆಯಲ್ಲಿ ಸೂಕ್ತ ದಾಖಲೆಗಳೊಂದಿಗೆ ಸ್ವಂತ ಖರ್ಚಿನಲ್ಲಿ ನೇರ ಸಂದರ್ಶನಕ್ಕೆ ಹಾಜರಾಗಬೇಕು ತಿಳಿಸಿದ್ದಾರೆ.

# ಸೀಳು ತುಟಿ, ವೈಕಲ್ಯಗಳಿಗೆ ಉಚಿತ ಶಸ್ತ್ರಚಿಕಿತ್ಸೆ
## ಡಾ. ಜಯಂತ್ ಹೇಳಿಕೆ | ಸಮಗ್ರ ಸೀಳು ತುಟಿ ಚಿಕಿತ್ಸೆ ಜಾಗೃತಿ ಕಾರ್ಯಕ್ರಮ

**ಹಂಪಿ ಟೈಮ್ಸ್ ಕೂಡ್ಲಿಗಿ**

ಪಟ್ಟಣದ ತಾಲೂಕು ಸಾರ್ವಜನಿಕ ಆಸ್ಪತ್ರೆಯ ಐಸಿಟಿಸಿ ವಿಭಾಗದಲ್ಲಿ ತಾಲೂಕು ಆರೋಗ್ಯ ಇಲಾಖೆ, ತಾಲೂಕು ಸಾರ್ವಜನಿಕ ಆಸ್ಪತ್ರೆ, ಅಖಿಲ ಭಾರತೀಯ ಮಹಿಳಾ ಸೇವಾ ಸಂಸ್ಥೆ ಬೆಂಗಳೂರು ಸಂಯುಕ್ತ ಆಶ್ರಯದಲ್ಲಿ ಮಂಗಳವಾರ ಸಮಗ್ರ ಸೀಳು ತುಟಿ ಚಿಕಿತ್ಸೆ ಜಾಗೃತಿ ಕಾರ್ಯಕ್ರಮ ಮತ್ತು ತಪಾಸಣಾ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು.

ಈ ಸಂದರ್ಭದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿ ಬೆಂಗಳೂರಿನ ಡಾ. ಜಯಂತ್ ಮಾತನಾಡಿ, ರಾಜ್ಯದಲ್ಲಿ ಪ್ರತಿವರ್ಷ 30 ರಿಂದ 40 ಸೀಳು ತುಟಿ ಇರುವ ಮಕ್ಕಳು ಜನಿಸುತ್ತಿದ್ದು ಇದಕ್ಕೆ ಕಾರಣವೇನೆಂದರೆ ಸಂಬಂಧಿಕರಲ್ಲಿ ವಿವಾಹವಾಗುವುದು, ವಂಶಪಾರಂಪರಿಕವಾಗಿ ಕುಟುಂಬದಲ್ಲಿ ಯಾರಿಗಾದರೂ ಈ ತೊಂದರೆ ಇದ್ದರೆ, ಮಹಿಳೆಯರು ಗರ್ಭಿಣಿ ಸಂದರ್ಭದಲ್ಲಿ ಹೆಚ್ಚು ಜ್ವರ ಇದ್ದಂತಹ ಸಂದರ್ಭದಲ್ಲಿ ನಾಟಿ ಔಷಧಗಳನ್ನು ತೆಗೆದುಕೊಳ್ಳುತ್ತಿದ್ದರೆ ಸೀಳು ತುಟಿ




ಸೀಳು ಗಂಟಲು ಸಮಸ್ಯೆಗಳು ಕಂಡು ಬರುವ ಸಾಧ್ಯತೆ ಹೆಚ್ಚಾಗಿ ಕಂಡುಬರುತ್ತದೆ. ಇದಕ್ಕೆ ಸೂಕ್ತ ಶಸ್ತ್ರ ಚಿಕಿತ್ಸೆಯನ್ನು ಮಾಡುವುದರ ಮೂಲಕ ಇಂತಹ ಮಕ್ಕಳಿಗೆ ಸೂಕ್ತ ಪರಿಹಾರವನ್ನು ಹುಡುಕಲು ಸಾಧ್ಯವಾಗುತ್ತದೆ.

ಇಂತಹ ಮಕ್ಕಳು ಯಾರೇ ಇದ್ದರೂ ಸಹ ರಂಗ ದೊರೆ ಮೆಮೋರಿಯಲ್ ಆಸ್ಪತ್ರೆಗೆ ಕಳುಹಿಸಿದರೆ ಸೀಳು ತುಟಿ ಮತ್ತು ಸೀಳು ಅಂಗಗಳು, ಸೀಳು ಮುಖ, ಮುಖಾಂಗ ವೈಕಲ್ಯ ಮುಂತಾದವುಗಳಿಗೆ ಉಚಿತ ಶಸ್ತ್ರ ಚಿಕಿತ್ಸೆಯನ್ನು ಮಾಡಲಾಗುವುದು ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಟಿಎಚ್‌ಓ ಡಾ. ಎಸ್. ಪಿ. ಪ್ರದೀಪ್ ಕುಮಾರ್ ಮಾತನಾಡಿ, ಆರೋಗ್ಯ ಇಲಾಖೆಯೊಂದಿಗೆ ಕೈಜೋಡಿಸಿ ಸಮಾಜಮುಖಿ ಕಾರ್ಯಗಳನ್ನು ಮಾಡುತ್ತಿರುವ ಅಖಿಲ ಭಾರತೀಯ ಮಹಿಳಾ ಸೇವಾ ಸಂಸ್ಥೆಯವರು ಈ ಕಾರ್ಯ ಶ್ಲಾಘನೀಯ. ಚಿಕ್ಕ ಮಕ್ಕಳು ಇಂತಹ ಸಮಸ್ಯೆಗಳಿಗೆ ಒಳಗಾಗಿರುತ್ತಾರೋ ಅಂತವರು ಇದರ ಸದ್ಬಳಕೆ ಮಾಡಿಕೊಳ್ಳಬೇಕು, ಬಾಲ್ಯದಲ್ಲಿಯೇ ಶಸ್ತ್ರಚಿಕಿತ್ಸೆ ಮಾಡಿದರೆ ತುಂಬಾ ಅನುಕೂಲ ಪೋಷಕರು ಗಾಬರಿಯಾಗದೇ ಇದರ ಸದುಪಯೋಗ ಪಡೆಯಲು ಮನವಿ ಮಾಡಿದರು.

ಅಖಿಲ ಭಾರತೀಯ ಮಹಿಳಾ ಸೇವಾ ಸಂಸ್ಥೆಯ ಸಂಯೋಜಕ ಸಾಗರ್, ಆರ್ ಬಿ ಎಸ್ ಕೆ ತಂಡದ ಡಾ. ನೇತ್ರಾವತಿ, ಡಾ.ವಿದ್ಯಾವತಿ, ಡಾ. ದೀಪಾ, ಶುಶ್ರೂಷಕ ಅಧಿಕಾರಿಗಳಾದ ಶ್ರುತಿ, ಕೃಷ್ಣವೇಣಿ, ಮಾಲಾಶ್ರೀ, ಆಪ್ತ ಸಮಾಲೋಚಕರಾದ ಕೆ.ಪ್ರಶಾಂತ ಕುಮಾರ್, ಓಬಣ್ಣ ಇದ್ದರು. 15ಕ್ಕೂ ಹೆಚ್ಚು ಸೀಳುತುಟಿ, ಸೀಳು ಅಂಗಗಳು, ಸೀಳು ಮುಖ ಇರುವ ಮಕ್ಕಳು ಹಾಗೂ ಪೋಷಕರು ಇದ್ದರು.

### ತುಂಗಭದ್ರಾ ಜಲಾಶಯದಿಂದ ನದಿಗೆ ಹೋಲಾಗುತ್ತಿರುವ ನೀರು



# ಕ್ಷಯಮುಕ್ತ ಜಿಲ್ಲೆಗಾಗಿ ಖಾಸಗಿ ವೈದ್ಯರ ಸಹಕಾರ ಅಗತ್ಯ



**ಹಂಪಿ ಟೈಮ್ಸ್ ಹೊಸಪೇಟೆ**

ಕ್ಷಯಮುಕ್ತ ವಿಜಯನಗರ ಜಿಲ್ಲೆ ನಿರ್ಮಾಣಕ್ಕೆ ಖಾಸಗಿ ವ್ಯದ್ಯರು ಅರೋಗ್ಯ ಇಲಾಖೆಯೊಂದಿಗೆ ಕೈ ಜೋಡಿಸಬೇಕು ಎಂದು ಕ್ಷಯರೋಗ ಮೇಲ್ವಿಚಾರಕ ಕಾಸಿಂಸಾಬ್ ಮನವಿ ಮಾಡಿದರು.

ಜಿಲ್ಲಾ ಅರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವಿಜಯನಗರ ಮತ್ತು ಜಿಲ್ಲಾ ಕ್ಷಯರೋಗ ನಿರ್ಮೂಲನ ಕೇಂದ್ರ ವಿಜಯನಗರ ಮತ್ತು ತಾಲೂಕು ಅರೋಗ್ಯಧಿಕಾರಿಗಳ ಕಚೇರಿ ಹೊಸಪೇಟೆ ವತಿಯಿಂದ ಹಮ್ಮಿಕೊಂಡಿದ್ದ ರಾಷ್ಟ್ರೀಯ ಕ್ಷಯರೋಗ ನಿರ್ಮೂಲನ ಕಾರ್ಯಕ್ರಮದಂಗವಾಗಿ ಭಾರತಿಯ ವ್ಯದ್ಯಕೀಯ ಸಂಘದ ಕಾರ್ಯದರ್ಶಿ ಡಾ.ರಾಜು.ಅವರನ್ನು ಭೇಟಿ ಮಾಡಿ ಮಾತನಾಡಿದರು. ಖಾಸಗಿ ಆಸ್ಪತ್ರೆಗಳಿಗೆ ಬರುವ ಸಂಶಯಾಸ್ಪದ ಕ್ಷಯರೋಗಿಗಳನ್ನು ನಮ್ಮ ಗಮನಕ್ಕೆ ತರಬೇಕು. ಎರಡು ವಾರಕ್ಕಿಂತ ಹೆಚ್ಚು ಕೆಮ್ಮು, ದೇಹದಲ್ಲಿ ತೂಕ ಕಡಿಮೆ ಆಗುವುದು, ಕಫದಲ್ಲಿ ರಕ್ತ ಬೀಳುವುದು, ಹಸಿವು ಆಗದೆ ಇರುವುದು, ಸಕ್ಕರೆ ಖಾಯಿಲೆ, ಮದ್ಯಾವ್ಯಸಾನಿಯವರು, ಗುಟ್ಕಾ ತಂಬಾಕು ಸೇವನೆ ಮಾಡುವವರ ಗಂಟಲಲ್ಲಿ ಮತ್ತು ಕಂಕುಲುನಲ್ಲಿ ಗಡ್ಡೆ ಇರುವುದು ಕ್ಷಯರೋಗದ ಲಕ್ಷಣಗಳಾಗಿದ್ದು,. ಮುಂತಾದ ಲಕ್ಷಣ ಕಂಡು ಬಂದರೆ ಸರ್ಕಾರಿ ಅರೋಗ್ಯ ಇಲಾಖೆಗೆ ಮಾಹಿತಿ ನೀಡಬೇಕು ಎಂದರು.

ಭಾರತೀಯ ವೈದ್ಯಕೀಯ ಸಂಘದ ಕಾರ್ಯದರ್ಶಿ ಡಾ.ರಾಜು ಮಾತನಾಡಿ, ಕ್ಷಯಮುಕ್ತ ವಿಜಯನಗರ ಜಿಲ್ಲೆಗೆ ಜಿಲ್ಲೆಯ ಎಲ್ಲಾ ಖಾಸಗಿ ವೈದ್ಯರು 2025ಕ್ಕೆ ಕ್ಷಯಮುಕ್ತ ಭಾರತ ಮಾಡಲು ನಮ್ಮ ಸಹಕಾರವಿದೆ ಎಂದರು.

ನಗರದ ವೈದ್ಯರಾದ ಡಾ ಆಕಾಶ್, ಡಾ ರಾಜು. ಡಾ ಗುಳಗಿ ಶಿವರಾಜ್, ಡಾ.ಸಿಕಂದರ್, ಡಾ.ಶ್ಯಾಮಸುಂದರ್, ಡಾ.ನವೀನ್ ಕುಮಾರ್ ಆಸ್ಪತ್ರೆ ಗಳಿಗೆ ಭೇಟಿ ನೀಡಿ ಕ್ಷಯರೋಗದ ಮಾಹಿತಿ ಪಡೆದರು. ಕ್ಷಯರೋಗ ಚಿಕಿತ್ಸೆ ಮೇಲ್ವಿಚಾರಕಿ ನಫೀಜ್ಹಾ ಬಾನು. ಟಿಬಿಎಚ್‌ವಿ ಸರಸ್ವತಿ ಮತ್ತು ಕಾಸಿಮ್ ಸಾಬ್ ಇದ್ದರು.

## ವಿಜ್ಞಾನ

# ಪ್ರಾಣಿಗಳು ಏಕೆ ಮೆಲುಕು ಹಾಕುತ್ತವೆ?

**ಆರ್.ಬಿ.ಗುರುಬಸವರಾಜ**

ಬೇಸಿಗೆ ರಜೆಗೆಂದು ತಾತನ ಮನೆಗೆ ಬಂದಿದ್ದ ಶ್ರೇಯಸ್ ದನದ ಕೊಟ್ಟಿಗೆಯಲ್ಲಿ ಸುತ್ತಾಡುತ್ತಿದ್ದ. ಕೆಲವು ಹಸುಗಳು ಮೇವು ತಿನ್ನುತ್ತಿದ್ದವು. ಬಹುತೇಕ ಹಸುಗಳು ಮಲಗಿದ್ದವು. ಮಲಗಿದ್ದ ಹಸುಗಳು ಕಣ್ಣುಮುಚ್ಚಿಕೊಂಡು ಪದೇ ಪದೇ ಬಾಯಾಡುತ್ತಿದ್ದವು. ಇದನ್ನು ನೋಡಿದ ಶ್ರೇಯಸ್ ತಾತನ ಬಳಿ ತೆರಳಿ 'ತಾತ ಹಸುಗಳು ಏಕೆ ಪದೇ ಪದೇ ಬಾಯಾಡುತ್ತಿವೆ' ಎಂದ. 'ಅವು ಬಾಯಾಡುತ್ತಿಲ್ಲ, ಮೆಲುಕು ಹಾಕುತ್ತಿವೆ. ಹಸುವಿನಂತೆ ಬಹುತೇಕ ಪ್ರಾಣಿಗಳು ಮೆಲುಕು ಹಾಕುತ್ತವೆ' ಎಂದರು ತಾತ. "ಪ್ರಾಣಿಗಳು ಏಕೆ ಮೆಲುಕು ಹಾಕುತ್ತವೆ?" ಎಂದು ಮತ್ತೊಂದು ಪ್ರಶ್ನೆ ಕೇಳಿದ. ಅದಕ್ಕೆ ತಾತ ಸಮಾದಾನದಿಂದ ಉತ್ತರಿಸಿದರು.

ಹಸು, ಕುರಿ ಮತ್ತು ಮೇಕೆಗಳಂತಹ ಕೆಲವು ಪ್ರಾಣಿಗಳು ತಮ್ಮ ಜೀರ್ಣಕ್ರಿಯೆ ಪ್ರಕ್ರಿಯೆಯ ಭಾಗವಾಗಿ ಮೆಲುಕು ಹಾಕುತ್ತವೆ. ಮೆಲುಕು ಹಾಕುವಿಕೆಯು ಕಠಿಣವಾದ ಆಹಾರ ವಸ್ತುಗಳನ್ನು ಪರಿಣಾಮ ಕಾರಿಯಾಗಿ ವಿಘಟಿಸಲು ಅನುವು ಮಾಡಿಕೊಡುತ್ತದೆ.



ಹಸು, ಕುರಿ ಮತ್ತು ಮೇಕೆಗಳಂತಹ ಕೆಲ ಸಸ್ಯಹಾರಿ ಪ್ರಾಣಿಗಳು ನಾಲ್ಕು ವಿಭಾಗಗಳನ್ನುಒಳಗೊಂಡಿರುವ ವಿಶೇಷವಾದ ಹೊಟ್ಟೆಯನ್ನು ಹೊಂದಿರುತ್ತವೆ. ಇದರಲ್ಲಿ ರುಮೆನ್, ರೆಟಿಕ್ಯುಲಮ್, ಒಮಾಸಮ್ ಮತ್ತು ಅಬೊಮಾಸಮ್ ಸೇರಿವೆ. ಈ ಪ್ರಾಣಿಗಳು ತಿನ್ನುವಾಗ ಆಹಾರವನ್ನು ನುಂಗುತ್ತವೆ ಮತ್ತು ರೂಮೆನ್‌ನಲ್ಲಿ ಸಂಗ್ರಹಿಸುತ್ತವೆ. ಆಹಾರವು ಅಲ್ಲಿ ಬ್ಯಾಕ್ಟೀರಿಯಾ ಮತ್ತು ಇತರ ಸೂಕ್ಷ್ಮಜೀವಿಗಳಿಂದ ಜೀರ್ಣವಾಗುತ್ತದೆ. ಆಂಶಿಕವಾಗಿ ಜೀರ್ಣವಾದ ಆಹಾರವನ್ನು ಮತ್ತೆ ಬಾಯಿಗೆ ತಂದು ಅಗಿಯುತ್ತವೆ. ಅಗಿಯುವ ಮೂಲಕ ಇನ್ನಷ್ಟು ಸಣ್ಣ ಸಣ್ಣ ಕಣಗಳಾಗಿ ಮಾರ್ಪಡಿಸಲು ಲಾಲಾರಸ ಬೆರೆಸುತ್ತವೆ. ಇದು ಜೀರ್ಣಕ್ರಿಯೆಗೆ ಸಹಾಯ ಮಾಡುವ ಕಿಣ್ವಗಳನ್ನು ಹೊಂದಿರುತ್ತದೆ. ಆಹಾರದಲ್ಲಿನ ಸೆಲ್ಯುಲೋಸ್ ಮತ್ತು ಇತರ ವಸ್ತುಗಳನ್ನು ಹುದುಗಿಸಲು ಮತ್ತು ವಿಘಟಿಸಲು ಸೂಕ್ಷ್ಮಜೀವಿಗಳು ಸಹಾಯ ಮಾಡುತ್ತವೆ.

ಮೆಲುಕು ಹಾಕುವಿಕೆಯು ಸಸ್ಯಾಹಾರಿ ಪ್ರಾಣಿಗಳಿಗೆ ಒಂದು ಪ್ರಮುಖ ರೂಪಾಂತರವಾಗಿದೆ. ಅವು ಸಾಧ್ಯವಾದಷ್ಟು ತಮ್ಮ ಆಹಾರದಿಂದ ಪೋಷಣೆಯನ್ನು ಪಡೆಯುತ್ತವೆ. ಮೆಲುಕು ಹಾಕುವ ಪ್ರಾಣಿಗಳು ಮುಖ್ಯವಾಗಿ ಹುಲ್ಲು ಮತ್ತು ಇತರ ಗಟ್ಟಿಯಾದ ನಾರಿನ ಸಸ್ಯವರ್ಗದಿಂದ ಕೂಡಿದ ಆಹಾರವನ್ನು ಸೇವಿಸುತ್ತವೆ. ಇಂತಹ ಆಹಾರವನ್ನು ಜೀರ್ಣಿಸಿಕೊಳ್ಳಲು ಮೆಲುಕು ಹಾಕುತ್ತವೆ.

## ಮಕ್ಕಳು ಅರಸರಾಗಬೇಕೆ?

ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು:** ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ. ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

# ಗ್ರಾಂಡ್ ಮಾಸ್ಟರ್ ಆಫ್ ರೈಟಿಂಗ್ ಅಭಿಜಿತ

ತನ್ನ 7ನೇ ವಯಸ್ಸಿನಲ್ಲಿ ಪುಸ್ತಕವನ್ನು ಪ್ರಕಟಿಸಿರುವ ಗಾಜಿಯಾಬಾದ್ ಮೂಲದ ಅಭಿಜಿತ ಎಂಬ ಎಂಟು ವರ್ಷದ ಬಾಲಕಿ ಬರವಣಿಗೆಯ ಕ್ಷೇತ್ರದಲ್ಲಿ ಮಿಂಚುತ್ತಿದ್ದಾಳೆ ಈಗಾಗಲೇ ಮೂರು ಪುಸ್ತಕಗಳನ್ನು ಬರೆದಿರುವ ಅಭಿಜಿತ ಗ್ರಾಂಡ್ ಮಾಸ್ಟರ್ ಆಫ್ ರೈಟಿಂಗ್ ಎಂಬ ಟೈಟಲ್ ಅನ್ನು ಪಡೆದಿದ್ದಾಳೆ. ಐದು ವರ್ಷದ ಬಾಲಕಿಯಾಗಿದ್ದಾಗಲೇ ಮೊದಲ ಕಥೆಯನ್ನು ಬರೆದಿರುವ ಅಭಿಜಿತಳ ಬರೆಯುವ ಆಸಕ್ತಿಯನ್ನು ಕಂಡ ಆಕೆಯ ಪಾಲಕರು ಆಕೆಗೆ ಪ್ರೋತ್ಸಾಹಿಸಿದರು.

ಲಾಕ್ಡೌನ್ ನ ಸಮಯದಲ್ಲಿ ಆಕೆಯ ಬರವಣಿಗೆ ಮತ್ತಷ್ಟು ಬೆಳವಣಿಗೆಯನ್ನು ಕಂಡಿತು. ಲಾಕ್ ಡೌನ್ ಗಳಿಗೆಗಳಲ್ಲಿ ಮನೆಯಿಂದ ಹೊರಗೆ ಕಾಲಿಡಲಾಗದ ಪರಿಸ್ಥಿತಿಯಲ್ಲಿ ಬರಹದ ಜಗತ್ತಿನಲ್ಲಿ ತನ್ನನ್ನು ತಾನು ತೊಡಗಿಸಿಕೊಂಡಳು ಅಭಿಜಿತ. ಅಭಿಜಿತಳ ತಂದೆ ಆಕೆಗೆ ಹೊಸ ಹೊಸ ವಿಷಯಗಳನ್ನು ಅರಿತುಕೊಳ್ಳಲು, ಟಿವಿ ಮತ್ತು ಮೊಬೈಲ್ಗಳಿಂದ ದೂರವಿರಿಸಲು ಪುಸ್ತಕ ಓದುವುದನ್ನು ರೂಢಿ ಮಾಡಿಸಿದರು. ದೇಶದ ಸುಪ್ರಸಿದ್ಧ ಕವಿ ಮೈಥಿಲಿಶರಣ್ ಗುಪ್ತ ಅವರ ಸಂಬಂಧಿಯಾಗಿರುವ ಅಭಿಜಿತಳ ಹೆಸರಿನಲ್ಲಿ ಈಗಾಗಲೇ ಐದು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ದಾಖಲೆಗಳಿವೆ.ಅತ್ಯಂತ ಚಿಕ್ಕ ವಯಸ್ಸಿನಲ್ಲಿ ದೇಶದ 40 ಜನ ಯುವ ಐಕಾನ್ ಗಳಲ್ಲಿ ಒಬ್ಬಳಾಗಿ ಆಕೆಯನ್ನು ಗುರುತಿಸಿರುವ ಸರ್ಕಾರ ಆಕೆಗೆ 'ಗ್ರಾಂಡ್ ಮಾಸ್ಟರ್ ಆಫ್ ರೈಟಿಂಗ್' ಎಂದು ಕರೆದು ಗೌರವಿಸಿದೆ.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ಬರಹದ ಜೊತೆ ಜೊತೆಗೆ ಅಭಿಜಿತ ವರ್ಣ ಚಿತ್ರ ಮತ್ತು ರೇಖಾ ಚಿತ್ರಗಳನ್ನು ಕೂಡ ಹವ್ಯಾಸವಾಗಿ ಮುಂದು ವರೆಸಿದ್ದಾಳೆ ಆಕೆಯ ಪಾಲಕರ ಒತ್ತಾಸೆ ಮತ್ತು ಆಕೆಯ ಸ್ವ ಆಸಕ್ತಿ ಆಕೆಯನ್ನು ಇಂದು ದೇಶದ ಮುಂಚೂಣಿ ಯುವಬರಹಗಾರರಲ್ಲಿ ಒಬ್ಬಳನ್ನಾಗಿಸಿದೆ.

ನಾನು ನನ್ನ ಬರಹದ ಮೂಲಕ ಇಡೀ ಜಗತ್ತಿನ ಜೊತೆ ಮಾತನಾಡಬಲ್ಲೆ ಎಂದು ತನ್ನ ಬರಹದ ಬಗೆಗಿನ ಪ್ರೀತಿಯನ್ನು ಹೇಳಿಕೊಳ್ಳುವ ಅಭಿಜಿತ ಇಂದಿನ ನವ ಪೀಳಿಗೆಯ ಮಕ್ಕಳಿಗೆ ಮಾದರಿಯಾಗಿದ್ದಾಳೆ.

ಅಯ್ಯೋ! ನಮ್ಮ ಮಕ್ಕಳು ಮೂರು ಹೊತ್ತೂ ಮೊಬೈಲ್ ಹಿಡಿತಾರೆ, ಒಂಚೂರು ನಮ್ಮ ಮಾತು ಕೇಳೋದಿಲ್ಲ ಒಂಚೂರು ನಮ್ಮ ಮಾತು ಕೇಳೋದಿಲ್ಲ, ಓದಿನಲ್ಲಿ ಆಸಕ್ತಿ ಇಲ್ಲ, ಪುಸ್ತಕ ಹಿಡಿಯೋದಿಲ್ಲ, ಶಾಲೆಯ ಪರೀಕ್ಷೆಗಳಲ್ಲಿ ಕಡಿಮೆ ಮಾರ್ಕು ತರುತ್ತಾರೆ ಎಂದು ಮಕ್ಕಳ ತಪ್ಪುಗಳನ್ನು ಪಟ್ಟಿ ಮಾಡಿ ಹೇಳುವ




ಪಾಲಕರೇ ಹೆಚ್ಚಾಗಿರುವ ನಮ್ಮ ಸಮಾಜದಲ್ಲಿ ಮಕ್ಕಳ ಆಸಕ್ತಿಯನ್ನು ಗಮನಿಸಿ ಅದಕ್ಕೆ ಪೂರಕವಾದ ವಾತಾವರಣವನ್ನು ಕಲ್ಪಿಸಿಕೊಟ್ಟರೆ ಅವರು ಕೂಡ ಅಭಿಜಿತಾಳಂತೆ ತಮ್ಮ ಆಸಕ್ತಿಯ ಕ್ಷೇತ್ರದಲ್ಲಿ ಹೆಸರು ಮಾಡಬಹುದು. ಮಕ್ಕಳು ಶಾಲೆಯಿಂದ ಮನೆಗೆ ಬಂದ ಕೂಡಲೇ ಅವರಿಗೆ ಸುಧಾರಿಸಿಕೊಳ್ಳಲು ಕೂಡ ಬಿಡದೆ ಬ್ಯಾಗನ್ನು ಎತ್ತಿಡು, ಡ್ರೆಸ್ ಚೇಂಜ್ ಮಾಡು, ಕೈ ಕಾಲು ಮುಖ ತೊಳೆದುಕೊಂಡು ಬಾ ಎಂದು ಶಿಸ್ತಿನ ಪಾಠ ಮಾಡತೊಡಗಿದರೆ ಮಕ್ಕಳು ಬೇಸರ ಮಾಡಿಕೊಳ್ಳುತ್ತವೆ.

ಮಕ್ಕಳು ಶಾಲೆಯಿಂದ ಬಂದ ನಂತರ ಅವರಿಗೆ ಸುಧಾರಿಸಿಕೊಳ್ಳಲು ಸಮಯಾವಕಾಶ ನೀಡಿ, ಅಂದು ಶಾಲೆಯಲ್ಲಿ ಏನು ನಡೆಯಿತು ಎಂಬುದರ ಕುರಿತು ಕುತೂಹಲ ವ್ಯಕ್ತಪಡಿಸಿದರೆ ಮಕ್ಕಳು ತಮ್ಮೆಲ್ಲ ಶಾಲಾ ದಿನಚರಿಯನ್ನು ಪಾಲಕರ ಮುಂದೆ ಹೇಳುತ್ತಾರೆ. ಆಸಕ್ತಿಯಿಂದ ಅವರು ಹೇಳುವ ಎಲ್ಲ ಮಾತುಗಳನ್ನು ಕೇಳಿ, ಮಕ್ಕಳಿಗೆ ಸೂಚಿಸಿದರೆ ತಕರಾರಿಲ್ಲದೆ ಮುಂದಿನ ಕೆಲಸಕ್ಕೆ ಅಣಿಯಾಗುತ್ತಾರೆ. ಮಕ್ಕಳು ಚೆನ್ನಾಗಿ ಓದಬೇಕಾದರೆ ಮನೆಯಲ್ಲಿ ಪಾಲಕರು ಮಕ್ಕಳಿಗೆ ಮನೆಯಲ್ಲಿ ಸರಿಯಾದ ಸ್ಥಳಾವಕಾಶ, ಕಾಲಾವಕಾಶವನ್ನು ಒದಗಿಸಿಕೊಡಬೇಕು. ಮಕ್ಕಳಿಗೆ ಬೇಕಾಗಿರೋದು ಅಪ್ಪ ಅಮ್ಮ ತಮ್ಮ ಜೊತೆ ಸಮಯ ಕಳೆಯಲಿ ಎಂಬ ಪುಟ್ಟ ಅಪೇಕ್ಷೆ.ಅಪ್ಪ ಅಮ್ಮ ಜೋರು ಜೋರಾಗಿ ಸ್ನೇಹಿತರೊಂದಿಗೆ ಮೊಬೈಲಿನಲ್ಲಿ ಮಾತನಾಡುತ್ತಾ ಇಲ್ಲವೇ ಟಿವಿ ನೋಡುತ್ತಾ ಮಕ್ಕಳಿಗೆ ರೂಮಿನಲ್ಲಿ ಕುಳಿತುಕೊಂಡು ಓದಿಕೋ ಬರೆದುಕೋ ಎಂದು ಹೇಳಿದರೆ ಯಾವ ಮಕ್ಕಳು ತಾನೇ ಕುಳಿತು ಓದುತ್ತಾರೆ?

ಮಕ್ಕಳಿಗೆ ಸಾಯಂಕಾಲ ಒಂದು ಗಂಟೆಯ ಕಾಲ ಆಟ ಆಡಲು ಅವಕಾಶ ನೀಡಿ ನಂತರ ಕೈ ಕಾಲು ಮುಖ ತೊಳೆಯಲು ಹೇಳಿ ಪ್ರತಿದಿನ ಸಾಯಂಕಾಲ ಇಲ್ಲವೇ ರಾತ್ರಿ ಸಮಯವೊಂದನ್ನು ನಿಗದಿ ಮಾಡಿ ಆ ಸಮಯದಲ್ಲಿ ಮಕ್ಕಳಿಗೆ ಅವರ ಶಾಲಾ ಹೋಂವರ್ಕ್ ಮಾಡಿಕೊಳ್ಳುವಾಗ ಪಾಲಕರು ಸಹ ಅವರೊಂದಿಗೆ ಕುಳಿತು ಅವರ ಕಾರ್ಯ ಚಟುವಟಿಕೆಗಳಲ್ಲಿ ಆಸಕ್ತಿವಹಿಸಿದರೆ ಮಕ್ಕಳು ನಿರಾಯಾಸವಾಗಿ ಹೋಮ್ ವರ್ಕ್ ಮುಗಿಸುತ್ತಾರೆ, ಪಾಲಕರು ಜೊತೆಗಿರುವುದರಿಂದ ಅವರ ಹುಮ್ಮಸ್ಸು ಮತ್ತಷ್ಟು ಹೆಚ್ಚುತ್ತದೆ. ಇದರ ಜೊತೆಗೆ ಮಕ್ಕಳ ಆಸಕ್ತಿಗಳತ್ತ ಗಮನಹರಿಸಿ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸಲು ಪ್ರೋತ್ಸಾಹಿಸಿ. ಮಕ್ಕಳು ಬಾಲ್ಯ ಜೀವನದಲ್ಲಿ ಕಲಿತ ಕೆಲ ಪಾಠಗಳು ಮರೆತು ಹೋಗಬಹುದು ಆದರೆ ಬಟ್ಟೆ ತರ ಚಟುವಟಿಕೆಗಳಲ್ಲಿ ಅವರು ಮಾಡಿದ ಚಿಕ್ಕ ಪುಟ್ಟ ಸಾಧನೆಗಳು ಅದಕ್ಕಾಗಿನ ಅವರ ತಯಾರಿ ಜೀವಿತದ ಕೊನೆಯವರೆಗೂ ಮಧುರ ನೆನಪಾಗಿ ಉಳಿದುಹೋಗುತ್ತದೆ.

ಭಾರತದ ಮಾಜಿ ರಾಷ್ಟ್ರಪತಿ, ಕ್ಷಿಪಣಿ ವಿಜ್ಞಾನಿ ಡಾಕ್ಟರ್ ಎಪಿಜೆ ಅಬ್ದುಲ್ ಕಲಾಂ ಅವರು ಕ್ಲಾಸ್ ರೂಮ್ ನ ಕೊನೆಯ ಬೆಂಚುಗಳಲ್ಲಿ ನಾವು ಮಾಡಿದ ತುಂಟಾಟಗಳು ನಮ್ಮ ಬದುಕಿನ ಮಧುರ ಸವಿ ಕ್ಷಣಗಳು ಎಂದು ಹೇಳಿರುವುದು ಇದಕ್ಕೇ ಇರಬಹುದು.

ಆದ್ದರಿಂದ ಪಾಲಕರೆ, ನಿಮ್ಮ ಮಕ್ಕಳು ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ಸಮಾನವಾಗಿ ಭಾಗವಹಿಸಲು ಪ್ರೋತ್ಸಾಹಿಸಿ ಅವರ ಭವ್ಯ ಭವಿಷ್ಯಕ್ಕೆ ಮುನ್ನುಡಿ ಬರೆಯಿರಿ. ಯಾರು ಬಲ್ಲರು ನಮ್ಮ ನಿಮ್ಮ ಮನೆಗಳಲ್ಲಿಯೂ ಕೂಡ ಓರ್ವ ಸಂಗೀತಗಾರ /ತಿ, ನೃತ್ಯಪಟು, ವಾದ್ಯಪಟು, ಕ್ರೀಡಾಪಟು, ವರ್ಣ ಚಿತ್ರ ಕಲಾವಿದ, ಬರಹಗಾರ ಹೀಗೆ ಹತ್ತು ಹಲವು ಕ್ಷೇತ್ರಗಳಲ್ಲಿ ಸಾಧನೆ ಮಾಡುವ ಪ್ರತಿಭಾನ್ವಿತ ಮಕ್ಕಳಿರಬಹುದು. ಮಕ್ಕಳು ತಮ್ಮ ಆಸಕ್ತಿಯ ಕ್ಷೇತ್ರಗಳಲ್ಲಿ ಬದುಕನ್ನು ಕಟ್ಟಿಕೊಳ್ಳಬಹುದು.ಐಷಾರಾಮಿ ಬದುಕನ್ನು ಸಾಗಿಸಲಾಗುವುದಿಲ್ಲ ಎಂದು ನೀವು ಅಂದುಕೊಳ್ಳುವುದಾದರೆ ಆತ್ಮ ಸಂತೃಪ್ತಿಗೆ ಸಮನಾದ ಐಶ್ವರ್ಯ ಇಲ್ಲ ಎಂಬುದು ನನ್ನ ಅಂಬೋಣ. ಏನಂತೀರಾ?

# ಸ್ವಾತಂತ್ರ್ಯ ಸ್ವೇಚ್ಛಾಚಾರವಾಗಿದೆಯೇ ?

ನಮ್ಮ ಭಾರತ ದೇಶದ ಸಂಸ್ಕೃತಿಯು ಶ್ರೀಮಂತವಾದದ್ದು. ಆದರೆ ಇತ್ತೀಚಿನ ದಿನಗಳಲ್ಲಿ ಖೇದಕರ ವಿಷಯವೆಂದರೆ ಸಂಪ್ರದಾಯ ಸಂಸ್ಕೃತಿಯ ಬದಲಾವಣೆಗೆ ಎಲ್ಲಿ ಅವಕಾಶ ಕಲ್ಪಿಸಿದೆಯೋ ಅಲ್ಲಿ ಇದರ ದುರುಪಯೋಗವಾಗಿ ಸ್ವಾತಂತ್ರ್ಯದ ಮುಸುಕಿನಲ್ಲಿ ಸ್ವೇಚ್ಛಾಚಾರ ಎದ್ದು ಕಾಣುತ್ತಿದೆ.

ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ ಎಂಬ ನಾಣ್ಣುಡಿಯಂತೆ ಪ್ರತಿಯೊಬ್ಬ ಸ್ತ್ರೀಯು ಶಿಕ್ಷಿತರಾಗಬೇಕು. ಆಗ ಮಾತ್ರ ದೇಶ ಪ್ರಗತಿ ಹೊಂದಲು ಸಾಧ್ಯ.ಮಹಿಳೆಯರು ತಮ್ಮ ನಿರ್ಧಾರ,ಬೇಕು ಬೇಡಗಳನ್ನು ತಾವೇ ಸ್ವತಂತ್ರವಾಗಿ ತೆಗೆದುಕೊಳ್ಳುವ ದೃಢತೆಯನ್ನು ಮೈಗೂಡಿಸಿಕೊಳ್ಳಬೇಕು.

ಸ್ವಾತಂತ್ರ್ಯದ ಹೆಸರಿನಲ್ಲಿ ಸ್ವೇಚ್ಛಾಚಾರವಾಗಬಾರದು. ಉದಾಹರಣೆಗೆ ಮಹಿಳೆಯರು ಅರೆಬರೆ ಉಡುಗೆ ತೊಟ್ಟು ಅಪರಾತ್ರಿಯಲ್ಲಿ ಪಬ್ಬು ಬಾರುಗಳಲ್ಲಿ ಕಾಣಿಸಿಕೊಳ್ಳುವುದನ್ನು ಸ್ವಾತಂತ್ರ್ಯವೆಂದು ಪರಿಗಣಿಸಲು ಸಾಧ್ಯವಿಲ್ಲ.

ಸ್ವಾತಂತ್ರ ಭಾರತದಲ್ಲಿ ಪ್ರತಿಯೊಬ್ಬ ಪ್ರಜೆಗೆ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುವ ಸ್ವಾತಂತ್ರ್ಯವಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಕೆಲವು ಮಾಧ್ಯಮಗಳು ಇದನ್ನು ತಮ್ಮ ಸ್ವಾರ್ಥಕ್ಕೆ ಬಳಸಿಕೊಂಡು ವ್ಯಕ್ತಿಗಳ ಸಂಸ್ಥೆಗಳ ತೇಜೋವಧೆ ಮಾಡುವ ಮೂಲಕ ತಮ್ಮ ಅಭಿವ್ಯಕ್ತ ಸ್ವಾತಂತ್ರವನ್ನು ಸ್ವೇಚ್ಛಾಚಾರಕ್ಕೆ ಬಳಸಿಕೊಂಡು ಸಮಾಜದ ಮೇಲೆ ನಕಾರಾತ್ಮಕ ಪರಿಣಾಮವನ್ನು ಬೀರುತ್ತಿರುವುದು ವಿಷಾಧನೀಯವಾಗಿದೆ.

ಜಗತ್ತಿನಾದ್ಯಂತ ತಂತ್ರಜ್ಞಾನವು ಅತಿ ವೇಗದಲ್ಲಿ ಬೆಳೆಯುತ್ತಿದೆ. ಹಾಗೆಯೇ ಅತಿ ಹೆಚ್ಚು ಸಮಯ ಯುವ ಜನತೆಯು ಸಾಮಾಜಿಕ ಜಾಲತಾಣಗಳ ಬಳಕೆಯಲ್ಲಿಯೇ ಕಳೆದು ಹೋಗುತ್ತಿದ್ದಾರೆ.

ಸ್ವಾತಂತ್ರ್ಯ ಒಂದು ತೆರನಾದ ಎರಡು ಅಲಗಿನ ಕತ್ತಿಯ ಹಾಗೆ. ಸ್ವಾತಂತ್ರದ ಜವಾಬ್ದಾರಿ ಹೊರುವುದು ಕಡಿಮೆ ಸಾಧನೆಯಲ್ಲ. ಸ್ವಾತಂತ್ರ್ಯದ ಬೆಲೆ ಅದನ್ನು ಕಳೆದುಕೊಂಡಾಗಲೇ ತಿಳಿಯುವುದು. ಬ್ರಿಟಿಷರು ಗುಲಾಮಿ ತನದಿಂದ ಹೊರಬಂದು ಹಿರಿಯರ ಸತತ ಹೋರಾಟದಿಂದ ದಕ್ಕಿಸಿ ಕೊಂಡ ಸ್ವಾತಂತ್ರ್ಯದ ಬೆಲೆ ನಮ್ಮ ಯುವ ಜನತೆ ಅರಿಯದೆ ದುರುಪಯೋಗ ಮಾಡುತ್ತಿರುವುದು ವಿಪರ್ಯಾಸವಾಗಿದೆ. ಮುಕ್ತ ವಾತಾವರಣದ ಹೆಸರಿನಲ್ಲಿ ಸ್ವೇಚ್ಛಾಚಾರ ಹೆಚ್ಚುತ್ತಿದೆ. ಪಾಶ್ಚಾತ್ಯ ಶೈಲಿಯ ಅನುಕರಣೆ ಧಾಳಿಯಿಟ್ಟಿದೆ. ಯುವ ಜನತೆ ಮಾದಕ ದ್ರವ್ಯ ಕುಡಿತದ ಹಿಂದೆ ಬಿದ್ದಿದ್ದಾರೆ. ಸ್ತ್ರೀ ಪುರುಷರ ರೀತಿ ನೀತಿಗಳು ಸಮಾಜಕ್ಕೆ



ಚೇತನ ಭಾರ್ಗವ
ಲೇಖಕಿ

Scan For Digital Colourful
HAMPI TIMES E-paper



ಮಾರಕವಾಗುತ್ತಿದೆ.ಹಿರಿಯರ ಆದರ್ಶ ಅವರ ತಿಳಿಹೇಳುವಿಕೆಯನ್ನು ವಿರೋಧಿಸುವುದೇ ತಮ್ಮ ಸ್ವಾತಂತ್ರ್ಯ ಎಂದು ಯುವ ಜನತೆ ಭಾವಿಸಿದ್ದಾರೆ.

ಈಗಂತೂ ಮೊಬೈಲ್ ಎಲ್ಲರ ಜೀವನದಲ್ಲಿ ಧಾಂಗುಡಿ ಇಟ್ಟಿದೆ. ಇಡೀ ಜಗತ್ತು ಅಂಗೈ ಅಗಲದ ಮೊಬೈಲ್ ಮಾಯಾ ಪರದೆ ಮೇಲೆ ಕಾಣಸಿಗುತ್ತದೆ. ಸಾಮಾಜಿಕ ಜಾಲತಾಣಗಳಿಂದ ಎಷ್ಟು ಉಪಯೋಗಗಳಿದೆಯೋ ಅನಾನುಕೂಲಗಳು ಹೆಚ್ಚುತ್ತಿವೆ. ಅಭಿವ್ಯಕ್ತಿ ಸ್ವಾತಂತ್ರ್ಯದ ಹೆಸರಲ್ಲಿ ಮತ್ತೊಬ್ಬರ ಬಗ್ಗೆ ವ್ಯಯಕ್ತಿಕ ಟೀಕೆ ಮಾನಹಾನಿ ಗಿಳಿಯುವ ಸ್ವೇಚ್ಛಾ ಪ್ರವೃತ್ತಿ ಹೆಚ್ಚುತ್ತಿದೆ. ಕ್ಷುಲ್ಲಕ ವಿಷಯಗಳಿಗೆ ಬಡಿದಾಡಿಕೊಂಡು ವೈಷಮ್ಯ ಬಿತ್ತುವ ಸಂದರ್ಭಗಳು ಸೃಷ್ಟಿಯಾಗುತ್ತಿವೆ. ಪ್ರೀತಿಯ ಹೆಸರಲ್ಲಿ ಮೋಸ ಹೋಗುವ ಹಾಗೂ ಸೈಬರ್ ಕಳ್ಳತನಗಳು ವಂಚನೆ ದೌರ್ಜನ್ಯ ಹೆಚ್ಚುತ್ತಿದೆ. ವ್ಯವಸ್ಥಿತವಾಗಿ ಭಯೋತ್ಪಾದನೆಯ ಬೀಜ ಬಿತ್ತುವ ಮತಾಂತರ ಗಳನ್ನು ಪ್ರಚೋದಿಸುವ ಲವ್ ಜಿಹಾದ್ ನಂತಹ ಹೆಣ್ಣು ಮಕ್ಕಳ ಮಾನ ಜೀವ ಹಾನಿಗೈಯುವ ಅನೇಕ ಘಟನೆಗಳು ಸ್ವೇಚ್ಛಾಚಾರದ ಪರಿಣಾಮಗಳೇ ಆಗಿದೆ.

ಆದ್ದರಿಂದ ಸ್ವಾತಂತ್ರ್ಯದ ಬೆಲೆ ಅರಿತು, ಸ್ವೇಚ್ಛಾಚಾರವನ್ನು ಮನದಿಂದ ದೂರ ಮಾಡಿ ಹಿರಿಯರ ಆದರ್ಶ ತ್ಯಾಗ ಬಲಿದಾನವನ್ನು ನೆನೆಯುತ್ತಾ ಶಿಸ್ತು ಸಂಯಮ ಹಾಗೂ ಸಮಾಜಮುಖಿಯಾಗಿ ಜನತೆ ತಮ್ಮೆಲ್ಲ ಸ್ವಾತಂತ್ರ್ಯದ ಹಾಗೂ ಸೌಲಭ್ಯಗಳನ್ನು ಬಳಸಿದರೆ ಜಗತ್ತು ಸಮೃದ್ಧಿಯಿಂದ ಏಳಿಗೆ ಕಾಣುತ್ತದೆ.

ಕವಿ ಮನಸು

## ತಾಯೆ ತುಂಗಭದ್ರೆ



ಯಾಕೋ ಅಳು ಬಂತು
ದುಃಖದಿ ಕಣ್ಣೀರು ಬಂತು
ಹೃದಯ ನೊಂದುಕೊಂಡಿತು।
ಅಳುವಿಗೆ ಚಿತ್ರಣ ಕಣ್ಣು ತುಂಬಿತು।

ತುಂಗಭದ್ರಾ ಡ್ಯಾಂ ಸುಂದರ
ನೋಡಲು ಹುಣ್ಣಿಮೆ ಚಂದಿರ
ರಭಸದಿ ಬೀಳುವ ನೀರು
ನೋಡುಗರ ಕಣ್ಣುಗಳು ಮಾರು।

ನಿನ್ನಂದ ಚಂದದ ನೋಟಕ್ಕೆ,
ವರ್ಣಿಸಲು ಪದಗಳು ಬೇಕೆ?
ಎಲ್ಲರೂ ಹೃದಯ ಕದ್ದ ಬೆಡಗಿಯರು
ನಿಮ್ಮಂಥ ಸುಂದರಿಯರು ಬೇರಾರು?।

ಮೂರು ರಾಜ್ಯಕ್ಕೆ ಹಸಿರು ತಂದಿರಿ
ವೈಯ್ಯಾರ ಮಾಡುತ ಮನಸು ಕದ್ದೀರಿ
ಸಿಹಿಯಾದ ನೀರು ಬಾಯಿ ಸಿಹಿ ಮಾಡಿದಿರಿ
ಆನೆ ನಡೆದಿದ್ದೆ ದಾರಿ ಎಂಬಂತೆ ಸಾಗಿದಿರಿ।

ಯಾರ ಕಣ್ಣು ಬಿತ್ತು ನಿಮ್ಮ ಮೇಲೆ
ಗೇಟು ಕಳಚಿ ಬಿತ್ತು ನಿಮಗೆ ಕಪ್ಪು ಕಲೆ
ರೈತರ ಪಾಲಿನ ನೀವು ನಿಜ ದೇವರು
ನಿಮಗೆ ಮೋಸ ಮಾಡದಿರಲಿ ಕೆಟ್ಟ
ಮನುಜರು।

– ಚಂದ್ರಶೇಖರಯ್ಯ ರೋಣದಮಠ

## ನೀನುಳಿದೆ ಬದಲದೇ...



ಕಪ್ಪು ಬಿಳುಪಿನ ಕಾಲ ಸಂದಿದೆ
ಈಗ ಬಣ್ಣದ ಜಗವಿದು
ನೀನು ಏತಕೆ ರೂಪ ಬದಲದೆ
ಹಿಂದಿನಂತೆಯೆ ಉಳಿದುದು

ಹೊಸತು ಕಂಡರೆ ಹಳತು ಮೂಲೆಗೆ
ಸರಿಸಿ ಬಿಡುವರು ಈ ಜನ
ಸೊಗಸಿನೆಲ್ಲವು ತನ್ನದೆನ್ನುತ
ಬಳಸಿ ಎಸೆಯುವ ದುರ್ಗುಣ

ನಿನ್ನ ಸ್ವಂತಿಕೆ ಉಳಿಸಿಕೊಂಡಿಹೆ
ಅದುವೆ ಶ್ರೇಷ್ಠವು ಎನಿಸಿತೆ
ಮನುಜನಂತೆಯೆ ಬಣ್ಣ ಬದಲಿಪ
ಗೀಳು ಬಾರದೆ ಹೋಯಿತೆ?

ಸುತ್ತ ಹಸಿರಿನ ಸಸ್ಯ ತುಂಬಿದೆ
ಹೂವನರಸುತ ಬಂದೆಯಾ
ದಣಿವನಾರಿಸೆ ಕೊಂಚ ಸಮಯಕೆ
ಪಡೆದ ಎಲೆಗಳ ಆಶ್ರಯಾ॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

## ಕೈ ಗೊಂಬೆ

ಹುಟ್ಟು ಅನಿರೀಕ್ಷಿತ ಸಾವು ಖಚಿತ
ಎದುರಿಸಲೇ ಬೇಕು ಒಳಿತು ಕೆಡುಕ
ಸಮಸ್ಯೆಗಳಿಗೆ ಪರಿಹಾರವ ಹುಡುಕುತ
ನಗುನಗುತ ಸಾಗಿಸಬೇಕು ಬದುಕ

ಜೀವನವು ಸುಖ ದುಃಖಗಳ ಸಾಗರ
ಭಗವಂತನೇ ಎಲ್ಲದಕ್ಕೂ ಸೂತ್ರಧಾರ
ವಿಧಿಯಾಟದ ಕೈ ಗೊಂಬೆಗಳು ನಾವೆಲ್ಲರು
ಅದನರಿತು ಬಾಳಬೇಕು ಮನುಜರು

ಬಿಡಬೇಕು ನಾನು ನನ್ನದೆಂಬ ವ್ಯಾಮೋಹ
ತಣಿಯಲಿ ನಮ್ಮ ಅಂತರಂಗದ ದಾಹ
ಪರಿಸ್ಥಿತಿಯ ಕೈ ಗೊಂಬೆಗಳು ನಾವು
ನಲಿವಿನಲಿ ಮರೆಯುವೆವು ನೋವು

ಮಾನವ ಜನ್ಮವೇ ದೊಡ್ಡದು
ಪ್ರೀತಿ ಮಮತೆಯೇ ಹಿರಿದು
ರಾಗ ದ್ವೇಷವ ಮರೆತು
ಸ್ನೇಹದಿ ಬಾಳೋಣ ಅರಿತು

– ಚೇತನ ಭಾರ್ಗವ ಬೆಂಗಳೂರು

# ನೀರು ಸಹಿತ ಗೇಟ್ ಸರಿಪಡಿಸುವ ಸಲಹೆ

## ಹೆಚ್ಚಿನ ಪ್ರಮಾಣದಲಿ ನೀರು ಹರಿಸದೇ ತುಂಗಭದ್ರಾ ಡ್ಯಾಮ್‌ಗೆ ಹೊಸ ಗೇಟ್ ಅಳವಡಿಸಬಹುದು

■ ಹಂಪಿ ಟೈಮ್ಸ್ ಹೊಸಪೇಟೆ

ಹೆಚ್ಚಿನ ಪ್ರಮಾಣದಲ್ಲಿ ನದಿಗೆ ನೀರು ಹರಿಸದೇ ನೀರನ್ನು ಉಳಿಸಿಕೊಂಡು ಸಹ ತುಂಗಭದ್ರಾ ಡ್ಯಾಮ್‌ಗೆ ಹೊಸ ಗೇಟ್ ಅಳವಡಿಸಬಹುದು ಎಂಬುದಾಗಿ ತಜ್ಞರು ಮಂಗಳವಾರ ಮಹತ್ವದ ಸಲಹೆ ನೀಡಿದರು.

ಟಿ.ಬಿ.ಡ್ಯಾಮ್‌ನ ಗೇಟ್ ನಂ.19ರ ಚೈನ್ ಲಿಂಕ್ ಕಟ್ ಆಗಿ ಅವಘಡ ಸಂಭವಿಸಿದ ಹಿನ್ನೆಲೆಯಲ್ಲಿ, ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವರಾಜ ತಂಗಡಗಿ, ಸಂಸದರಾದ ರಾಜಶೇಖರ ಹಿಟ್ನಾಳ, ಶಾಸಕರಾದ ಹೆಚ್.ಆರ್.ಗವಿಯಪ್ಪ, ಹಂಪನಗೌಡ ಬಾದರ್ಲಿ ಸೇರಿದಂತೆ ಇನ್ನಿತರರು ಆಗಸ್ಟ್ 12ರಂದು ಇಡೀ ದಿನ ತುಂಗಭದ್ರಾ ಡ್ಯಾಮ್ ಪ್ರದೇಶದಲ್ಲಿದ್ದು, ಗೇಟ್ ದುರಸ್ತಿಯ ಮೇಲುಸ್ತುವಾರಿ ಪರಿಶೀಲಿಸಿದರು.

ನ್ಯಾಷನಲ್ ಡ್ಯಾಮ್ ಗೇಟ್ ಎಕ್ಸಪರ್ಟ್ ಕಣ್ಣಯ್ಯ ನಾಯ್ಡು, ತುಂಗಭದ್ರಾ ಬೋರ್ಡ್‌ನ ಕಾರ್ಯದರ್ಶಿ, ಕರ್ನಾಟಕ ನೀರಾವರಿ ನಿಗಮದ ಕಾರ್ಯದರ್ಶಿ, ಆಂಧ್ರಪ್ರದೇಶದ ನೀರಾವರಿ ಇಲಾಖೆಯ ಕಾರ್ಯದರ್ಶಿ, ಕರ್ನಾಟಕ ನೀರಾವರಿ ನಿಗಮದ ಎಂ.ಡಿ., ಕರ್ನಾಟಕ ನೀರಾವರಿ ನಿಗಮದ ಮುಖ್ಯ ಎಂಜಿನಿಯರ್, ನ್ಯಾಷನಲ್ ಡ್ಯಾಮ್ ಸೇಫಟಿ ಏಜೆನ್ಸಿಯ ಮುಖ್ಯ ಎಂಜಿನಿಯರ್, ಜೆಎಸ್‌ಡಬ್ಲ್ಯೂನ ಎಕ್ಸಪರ್ಟ, ಹಿಂದುಸ್ತಾನ್ ಸ್ಟೀಲ್ ವರ್ಕ್, ನಾರಾಯಣ ಸ್ಟೀಲ್ ವರ್ಕ ಗೇಟ್ ತಜ್ಞರು ಸೇರಿದಂತೆ ಇನ್ನಿತರ ತಜ್ಞರೊಂದಿಗೆ ಸಚಿವರು, ಸಂಸದರು, ಶಾಸಕರು ಮಾತುಕತೆ ನಡೆಸಿದರು.



ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ, ನಲಿನ್ ಅತುಲ್ ಅವರೊಂದಿಗೆ ಸಹ ಚರ್ಚಿಸಿದರು.

ಈಗ ಹಾಳಾಗಿರುವ ಗೇಟ್ ಒಟ್ಟು 60 ಅಡಿ ಉದ್ದ ಇದೆ. ಇಲ್ಲಿ ತಲಾ 12 ಅಡಿಯ 5 ಸೆಗ್ಮೆಂಟ್‌ಗಳನ್ನು ಕ್ರೇನ್ ಮೂಲಕ ಕೆಳಗಿಳಿಸಿ ನೀರನ್ನು ತಡೆ ಹಿಡಿಯಬಹುದಾಗಿದೆ ಎಂದು ತಜ್ಞರು ಸಲಹೆ ಮಾಡಿದರು. ಜಿಂದಾಲ್ ಸೇರಿದಂತೆ ವಿವಿಧೆಡೆ ಸೆಗ್ಮೆಂಟ್‌ಗಳ ತಯಾರಿ ನಡೆಯುತ್ತಿದೆ ಎಂದು

ನೀರಾವರಿ ನಿಗಮದ ಅಧಿಕಾರಿಗಳು ಜಿಲ್ಲಾ ಉಸ್ತುವಾರಿ ಸಚಿವರು, ಸಂಸದರು, ಶಾಸಕರಿಗೆ ಮಾಹಿತಿ ನೀಡಿದರು.

ಡ್ಯಾಮ್ ಎಕ್ಸಪರ್ಟ್ ಜೊತೆ ಮಾತುಕಥೆ: ಆಲಮಟ್ಟಿ, ನಾರಾಯಣಪುರ, ಕೆಆರ್‌ಎಸ್ ಸೇರಿದಂತೆ ಹಲವಾರು ಜಲಾಯಶಯಗಳಿಗೆ ಗೇಟ್ ಅಳವಡಿಸಿದ ನ್ಯಾಷನಲ್ ಡ್ಯಾಮ್ ಗೇಟ್ ಎಕ್ಸಪರ್ಟ್ ಕಣ್ಣಯ್ಯ ನಾಯ್ಡು ಅವರೊಂದಿಗೆ ಆಗಸ್ಟ್ 12ರಂದು ಜಿಲ್ಲಾ ಉಸ್ತುವಾರಿ ಸಚಿವರಾದ ಶಿವರಾಜ ತಂಗಡಗಿ, ಸಂಸದರಾದ ರಾಜಶೇಖರ್ ಹಿಟ್ನಾಳ, ಶಾಸಕರಾದ ಹೆಚ್.ಆರ್. ಗವಿಯಪ್ಪ ಮತ್ತು ಹಂಪನಗೌಡ ಬಾದರ್ಲಿ ಅವರು ಸುಧೀರ್ಘ ಸಮಯ ಮಾತುಕತೆ ನಡೆಸಿ ಹೊಸ ಗೇಟ್ ಅಳವಡಿಕೆಯ ಬಗ್ಗೆ ಸಲಹೆ ಪಡೆದುಕೊಂಡರು.

ಭಾವುಕರಾದ ಕಣ್ಣಯ್ಯ ನಾಯ್ಡು: ಜಿಲ್ಲಾ ಉಸ್ತುವಾರಿ ಸಚಿವರು, ಸಂಸದರು, ಶಾಸಕರೊಂದಿಗೆ ಮಾತನಾಡುವ ವೇಳೆಯಲ್ಲಿ ಕಣ್ಣಯ್ಯ ನಾಯ್ಡು ಅವರು, 'ನಾನು ಇಲ್ಲಿಯೇ ನೌಕರಿ ಮಾಡಿದ್ದೇನೆ. ತುಂಗಭದ್ರಾ ನದಿಯ ನೀರು ಕುಡಿದು ಬೆಳೆದಿದ್ದೇನೆ. ಈ ಭಾಗದ ಜನರ ಜೀವನಾಡಿಯಾದ ತುಂಗಭದ್ರಾ ಮಡಿಲಿನಿಂದ ನೀರು ವ್ಯರ್ಥವಾಗಿಹರಿಯುತ್ತಿರುವುದುನೋಡಿಮರುಗುತ್ತಿದ್ದೇನೆ' ಎಂದು ಭಾವುಕರಾದರು. ಬೇರೆ ಬೇರೆ ಜಲಾಯಶಯಗಳಿಗೆ ಯಾವುದೇ ರೀತಿಯ ಅವಘಡಗಳಿಗೆ ಅವಕಾಶವಿಲ್ಲದಂತೆ ತಮ್ಮ ಮಾರ್ಗದರ್ಶನದಲ್ಲಿ ಎಂಜಿನಿಯರಗಳ ತಂಡವು ಹೊಸ ಗೇಟ್ ಅಳವಡಿಸಿ ಯಶ ಕಂಡದ್ದರ ಬಗ್ಗೆ ಅವರು ತಮ್ಮ ಅನುಭವವನ್ನು ಹಂಚಿಕೊಂಡರು.

ಸಿಎಂ ಜೊತೆಗೆ ಮಾತುಕತೆಗೆ ಅವಕಾಶ: ಆಗಸ್ಟ್ 13ರಂದು ಮಾನ್ಯ ಮುಖ್ಯಮಂತ್ರಿಗಳು ಡ್ಯಾಮ್‌ಗೆ ಭೇಟಿ ನೀಡುತ್ತಿದ್ದು, ತಲಾ 12 ಅಡಿಯ 5 ಸೆಗ್ಮೆಂಟ್‌ಗಳನ್ನು ಕ್ರೇನ್ ಮೂಲಕ ಕೆಳಗಿಳಿಸಿ ನೀರನ್ನು ತಡೆ ಹಿಡಿಯಬಹುದಾಗಿದೆ ಎನ್ನುವ ಸಲಹೆಯ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳೊಂದಿಗೆ ಮಾತುಕತೆ ನಡೆಸಲು ತಮಗೆ ಅವಕಾಶ ಕಲ್ಪಿಸಿಕೊಡುವುದಾಗಿ ಚರ್ಚೆಯ ವೇಳೆ ಕಣ್ಣಯ್ಯ ನಾಯ್ಡು ಅವರಿಗೆ ಸಚಿವರು, ಸಂಸದರು, ಶಾಸಕರು ತಿಳಿಸಿದರು.

ಕರ್ನೂಲ್ ಸಂಸದರು ಭೇಟಿ: ಕರ್ನೂಲ್ ಸಂಸದರಾದ ಪಂಚಲಿಂಗ ನಾಗರಾಜ, ಆಲೂರು ಮತ್ತು ಮಂತ್ರಾಲಯದ ಮುಖಂಡರಾದ ವೀರಭದ್ರಗೌಡ, ರಾಘವೇಂದ್ರ ರೆಡ್ಡಿ ಅವರು ಸಹ ಆಗಸ್ಟ್ 12ರಂದು ಟಿ.ಬಿ.ಡ್ಯಾಮ್‌ಗೆ ಭೇಟಿ ನೀಡಿ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರು, ಸಂಸದರು, ಕೊಪ್ಪಳ ಹಾಗೂ ವಿಜಯನಗರ ಮತ್ತು ಸಿಂಧನೂರ ಶಾಸಕರೊಂದಿಗೆ ಗೇಟ್ ದುರಸ್ತಿಯ ಬಗ್ಗೆ ಚರ್ಚಿಸಿದರು.

# ದೇಶಾಭಿಮಾನ ಹೆಚ್ಚಿಸಿದ ತಿಂಗಳ ಸೊಬಗು ಸಾಂಸ್ಕೃತಿಕ ಕಾರ್ಯಕ್ರಮ



■ ಹಂಪಿ ಟೈಮ್ಸ್ ಬಳ್ಳಾರಿ

ಹರ್ ಘರ್ ತಿರಂಗಾ ಅಭಿಯಾನ ಅಂಗವಾಗಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಸಾಂಸ್ಕೃತಿಕ ಸಮುಚ್ಚಯ ನಿರ್ವಹಣಾ ಸಮಿತಿ ಇವರ ವತಿಯಿಂದ ಸೋಮವಾರ ಸಂಜೆ ಆಯೋಜಿಸಲಾಗಿದ್ದ "ತಿಂಗಳ ಸೊಬಗು" ಸಾಂಸ್ಕೃತಿಕ ಕಾರ್ಯಕ್ರಮ ಸಾರ್ವಜನಿಕರಲ್ಲಿ ದೇಶಾಭಿಮಾನ ಮೂಡಿಸಿತು.

ನಗರದ ಡಾ.ರಾಜಕುಮಾರ್ ರಸ್ತೆಯ ಸಾಂಸ್ಕೃತಿಕ ಸಮುಚ್ಚಯ ಆವರಣದ ನಾಡೋಜ ಸುಭದ್ರಮ್ಮ ಮನ್ಸೂರು ಬಯಲು ರಂಗಮಂದಿರದಲ್ಲಿ ಆಯೋಜಿಸಿದ್ದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ದೇಶಭಕ್ತಿಯ ಲಹರಿ ಹರಿಯುತಿತ್ತು.

ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮ ಎಲ್ಲರನ್ನೂ ಆಕರ್ಷಿಸಿತು. ದೇಶಭಕ್ತಿ ಗೀತೆಗಳ ಗಾಯನ ಮತ್ತು ಸಂಗೀತಕ್ಕೆ ತಕ್ಕಂತೆ ಹೆಜ್ಜೆ ಹಾಕಿದ ಚಿಣ್ಣರ ಕಲಾನೃತ್ಯಕ್ಕೆ ಕಲಾಭಿಮಾನಿಗಳು ಚಪ್ಪಾಳೆಯ ಸುರಿಮಳೆಗೈದರು.

ಬಳ್ಳಾರಿಯ ಮೂನ್ ವಾಕರ್ಸ್ ಸಾಂಸ್ಕೃತಿಕ ಕಲಾ ಸಂಘದ ದೇಶಭಕ್ತಿ ಗೀತೆಗಳ ಸಮೂಹ ನೃತ್ಯಕ್ಕೆ ಹಿರಿಯರು– ಕಿರಿಯರೆನ್ನದೇ ಪ್ರತಿಯೊಬ್ಬರು ದೇಶಾಭಿಮಾನದಲ್ಲಿ ಲೀನವಾಗಿದ್ದರು.

ಬಳಿಕ ಬಳ್ಳಾರಿ ತಾಲ್ಲೂಕಿನ ಶಂಕರಬಂಡೆ ಗ್ರಾಮದ ಪಿ.ಹೊನ್ನೂರ್‌ಸಾಬ್ ಮತ್ತು ಸಂಗಡಿಗರ "ರಾಮಾಯಣ" ಬಯಲಾಟ ಸನ್ನಿವೇಶಗಳನ್ನು ಪಾತ್ರಧಾರಿಗಳು ಕಲಾ ಪ್ರೇಕ್ಷಕರ ಕಣ್ಣಂಚಿನಲ್ಲಿ ಕಟ್ಟಿದಂತಹ ಅಭಿನಯ ಪಾತ್ರಗಳು ಭರಪೂರ ಮನರಂಜನೆ ನೀಡಿತು.

ಸಾಂಸ್ಕೃತಿಕ ಸೊಬಗು ಸವಿಯಲು ಅಪರ ಜಿಲ್ಲಾಧಿಕಾರಿ ಮಹಮ್ಮದ್.ಎನ್ ಝುಬೇರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ನಾಗರಾಜ ಸೇರಿದಂತೆ ಅಧಿಕಾರಿಗಳು, ಇಲಾಖೆಯ ಸಿಬ್ಬಂದಿ ಹಾಗೂ ನಗರವಾಸಿಗಳು ಉಪಸ್ಥಿತರಿದ್ದರು.

# ಆಗಸ್ಟ್ 15ರಂದು 78ನೇ ಸ್ವಾತಂತ್ರ್ಯ ದಿನಾಚರಣೆ

■ ಹಂಪಿ ಟೈಮ್ಸ್ ಹೊಸಪೇಟೆ

ಜಿಲ್ಲಾಡಳಿತದಿಂದ 78ನೇ ಸ್ವಾತಂತ್ರ್ಯೋತ್ಸವ ದಿನಾಚರಣೆ ಕಾರ್ಯಕ್ರಮವು ಆಗಸ್ಟ್ 15ರಂದು ಬೆಳಿಗ್ಗೆ 9 ಗಂಟೆಗೆ ಜಿಲ್ಲಾ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದೆ.

ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಸಚಿವರು ಹಾಗೂ ವಿಜಯನಗರ ಮತ್ತು ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವರಾದ ಬಿ.ಝೆಡ್. ಜಮೀರ್ ಅಹ್ಮದ್ ಖಾನ್ ಅವರು ಧ್ವಜಾರೋಹಣ ನೆರವೇರಿಸುವರು.

ಶಾಸಕರಾದ ಹೆಚ್. ಆರ್. ಗವಿಯಪ್ಪ ಅವರು ಅಧ್ಯಕತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಸಂಸದರಾದ ಈ. ತುಕಾರಾಂ, ಪ್ರಭಾ ಮಲ್ಲಿಕಾರ್ಜುನ, ಶಾಸಕರಾದ ನೇಮಿರಾಜ್ ನಾಯ್ಕ್, ಡಾ.ಶ್ರೀನಿವಾಸ ಎನ್.ಟಿ., ಕೃಷ್ಣ ನಾಯ್ಕ, ಎಂ.ಪಿ. ಲತಾ ಮಲ್ಲಿಕಾರ್ಜುನ, ಬಿ.ದೇವೇಂದ್ರಪ್ಪ, ವಿಧಾನ ಪರಿಷತ್ ಶಾಸಕರಾದ ಚಂದ್ರಶೇಖರ ಬಿ.ಪಾಟೀಲ್, ವೈ.ಎಂ. ಸತೀಶ್, ಶಶೀಲ್ ಜಿ. ನಮೋಶಿ, ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷರಾದ ಹೆಚ್.ಎನ್.ಎಫ್. ಇಮಾಮ್ ನಿಯಾಜಿ, ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ನೊಂಗ್ಜಾಯ್ ಮೊಹಮ್ಮದ್ ಅಲಿ ಅಕ್ರಂ ಶಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಶ್ರೀಹರಿ ಬಾಬು ಬಿ.ಎಲ್. ಅವರು ಉಪಸ್ಥಿತರಿರುವರು.

ಕಾರ್ಯಕ್ರಮಗಳ ವಿವರ: ಬೆಳಿಗ್ಗೆ 8.30ಕ್ಕೆ ಜಿಲ್ಲಾ ಕ್ರೀಡಾಂಗಣದಲ್ಲಿ ಪಥ ಸಂಚಲನ ಮತ್ತು ಕವಾಯತ್ ತಂಡಗಳ ಸೇರ್ಪಡೆ, 8.55ಕ್ಕೆ ಕ್ರೀಡಾಂಗಣಕ್ಕೆ ಮುಖ್ಯ ಅತಿಥಿಗಳ ಆಗಮನ, 9 ಗಂಟೆಗೆ ಮುಖ್ಯ ಅತಿಥಿಯವರಿಂದ ಧ್ವಜಾರೋಹಣ ಮತ್ತು ರಾಷ್ಟ್ರಗೀತೆ, 9.05ಕ್ಕೆ ಪರೇಡ್ ವೀಕ್ಷಣೆ, 9.20ಕ್ಕೆ ಗೌರವ ಸ್ವೀಕಾರ ಮತ್ತು ಪಥ ಸಂಚಲನೆ, 9.40ಕ್ಕೆ ಸ್ವಾತಂತ್ರ್ಯೋತ್ಸವ ಸಂದೇಶ, 9.55ಕ್ಕೆ ಪಥ ಸಂಚಲನದಲ್ಲಿ ಭಾಗವಹಿಸಿದ ತುಕಡಿಗಳ ವಿಸರ್ಜನೆ, 10 ಗಂಟೆಗೆ ಶಿಕ್ಷಣ ಇಲಾಖೆಯ ವತಿಯಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ 10.45ಕ್ಕೆ ಪ್ರಶಸ್ತಿ ಮತ್ತು ಸನ್ಮಾನ ಸಮಾರಂಭ ನಡೆಯಲಿವೆ ಎಂದು ತಿಳಿಸಿದೆ.

# ಮೊದಲ ಬೆಳೆಗೆ ನೀರು ಕೊಡ್ತೀವಿ ಚಿಂತಿಸಬೇಡಿ: ಸಿಎಂ



ಮೊದಲ ಪುಟದಿಂದ

ಕ್ರಮ ಕೈಗೊಳ್ಳಲಾಗುವುದು. ಒಂದು ವೇಳೆ 1625 ಅಡಿಗೆ (76.48 ಟಿ.ಎಂ.ಸಿ) ಗೇಟು ಅಳವಡಿಸಲು ಸಾಧ್ಯವಾಗದಿದ್ದಲ್ಲಿ ಜಲಾಶಯದ ಮಟ್ಟವನ್ನು 1621 ಅಡಿಗೆ (64.16 ಟಿ.ಎಂ.ಸಿ) ಸಂಗ್ರಹಣೆ ಯನ್ನು ಕಡಿಮೆಮಾಡಿ ಸ್ಟಾಫ್‌ಲಾಗ್ ಗೇಟ್‌ನ್ನು ಅಳವಡಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಅವರು ತಿಳಿಸಿದರು.

ಆಗಸ್ಟ್ 12ರಂದು ನಡೆದ ತುಂಗಭದ್ರಾ ಮಂಡಳಿಯ ಸಭೆಯಲ್ಲಿ ತಾತ್ಕಾಲಿಕ ಸ್ಟಾಫ್‌ಲಾಗ್ ಗೇಟನ್ನು ಅಳವಡಿಸಲು ಕನಿಷ್ಠ 5 ದಿನಗಳ ಕಾಲಾವಕಾಶ ಬೇಕಾಗುತ್ತದೆಂದು ಅಂದಾಜಿಸಿ ರುತ್ತಾರೆ. ಆಗಸ್ಟ್ ತಿಂಗಳಿನಲ್ಲಿ 39 ಟಿ.ಎಂ.ಸಿಯಷ್ಟು, ಸೆಪ್ಟೆಂಬರ್‌ನಲ್ಲಿ 30 ಟಿ.ಎಂ.ಸಿಯಷ್ಟು, ಅಕ್ಟೋಬರ್ ತಿಂಗಳನಲ್ಲಿ 16 ಟಿ.ಎಂ.ಸಿಯಷ್ಟು ಮತ್ತು ನವೆಂಬರ್‌ನಲ್ಲಿ 4 ಟಿ.ಎಂ.ಸಿಯಷ್ಟು ಒಟ್ಟಾರೆ 90 ಟಿ.ಎಂ.ಸಿಯಷ್ಟು ಒಳಹರಿವುಬರಬಹುದೆಂದುಅಂದಾಜಿಸಲಾಗಿದೆ ಎಂದು ತಿಳಿಸಿದರು. ಪ್ರಸ್ತುತ ಜಲಾಶಯದ ಮಟ್ಟ 1629.00 ಅಡಿ ಇದ್ದು, ಸಂಗ್ರಹಣ ಸಾಮರ್ಥ್ಯ 90 ಟಿ.ಎಂ.ಸಿ ಇರುತ್ತದೆ. ಇಲ್ಲಿಯವರೆಗೆ 25.00 ಟಿ.ಎಂ.ಸಿಯಷ್ಟು ನೀರನ್ನು ಬಳಸ ಲಾಗಿರುತ್ತದೆ ಎಂದು ಹೇಳಿದರು.

ತುಂಗಭದ್ರಾ ಯೋಜನೆಯಿಂದ ಕರ್ನಾಟಕದ 9,26,000 ಎಕರೆ, (2 ಬೆಳೆಗಳು ಸೇರಿ) ಆಂಧ್ರಪ್ರದೇಶದ 6,25,000 ಎಕರೆ ಮತ್ತು ತೆಲಂಗಾಣದ 87,000 ಎಕರೆ ಪ್ರದೇಶ ನೀರಾವರಿಗೊಳಪಡುತ್ತದೆ. ಜಲಾಶಯದ ಮಟ್ಟ 1621 ಅಡಿಗೆ ಇಳಿಸಿದರು ಸಹ ಜಲಾಶಯದಲ್ಲಿ ಇನ್ನೂ ಸುಮಾರು 64 ಟಿ.ಎಂ.ಸಿಯಷ್ಟು ನೀರು ಲಭ್ಯವಾಗುತ್ತಿದ್ದು, ಈಗಾಗಲೇ ಅಂದಾಜಿಸಿದಂತೆ ಮುಂಬರುವ ಸುಮಾರು 90 ಟಿ.ಎಂ.ಸಿಯಷ್ಟು ಒಳಹರಿವಿನ ನೀರಿನ ಪ್ರಮಾಣವನ್ನು ಪರಿಗಣಿಸಿ, ಮುಂಗಾರು ಹಂಗಾಮಿನ ಅಚ್ಚುಕಟ್ಟಿಗೆ (ಸುಮಾರು 10 ಲಕ್ಷ ಎಕರೆ ಪ್ರದೇಶಕ್ಕೆ) ಸಂಪೂರ್ಣ ನೀರೊದಗಿಸಬಹುದಾಗಿದೆ. ತುಂಗ ಭದ್ರಾ ಮಂಡಳಿಯ ರೆಗ್ಯೂಲೇಷನ್ ಆಫ್ ವಾಟರ್ ಫಾರ್ ಯುಟಿಲೈಜಷನ್ ರೂಲ್–2 ರನ್ವಯ ಎಡೆದಂಡೆ ಕಾಲುವೆ ನಿರ್ವಹಣೆ ಹೊರತು ಪಡಿಸಿ, ಬಾಕಿ ಕಾಲುವೆಗಳು ಹಾಗೂ ಆಣೆಕಟ್ಟು ನಿರ್ವಹಣೆ ತುಂಗಭದ್ರಾ ಮಂಡಳಿಯ ವ್ಯಾಪ್ತಿಗೆ ಬರುತ್ತದೆ ಎಂದು ತಿಳಿಸಿದರು.

ವಿಜಯನಗರ ಜಿಲ್ಲಾ ಉಸ್ತುವಾರಿ ಸಚಿವ ಬಿ.ಝೆಡ್.ಜಮೀರ್ ಅಹ್ಮದ್‌ಖಾನ್, ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿ, ಸಣ್ಣ ನೀರಾವರಿ ಸಚಿವ ಎನ್.ಎಸ್.ಬೋಸರಾಜು, ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರ ಬಸವರಾಜ ರಾಯರಡ್ಡಿ, ಆಂಧ್ರಪ್ರದೇಶ ರಾಜ್ಯದ ನೀರಾವರಿ ಸಚಿವ ನಿಮ್ಮಳರಾಯ ನಾಯ್ಡು, ಹಣಕಾಸು ಸಚಿವ ಪಯ್ಯಾವುಲ ರಾಸವಾ, ಸಂಸದರಾದ ಈ. ತುಕಾರಾಮ, ಕೆ.ರಾಜಶೇಖರ ಹಿಟ್ನಾಳ್, ಶಾಸಕ ಹೆಚ್.ಆರ್.ಗವಿಯಪ್ಪ, ಡಾ.ಶ್ರೀನಿವಾಸ ಎನ್.ಟಿ., ಕೃಷ್ಣ ನಾಯ್ಕ, ಎಂ.ಪಿ. ಲತಾ ಮಲ್ಲಿಕಾರ್ಜುನ, ಕೆ.ರಾಘವೇಂದ್ರ ಹಿಟ್ನಾಳ, ಹಂಪನಗೌಡ ಬಾದರ್ಲಿ, ಬಸವನಗೌಡ ತುರ್ವಿಹಾಳ, ಜಿ.ಎನ್.ಗಣೇಶ್, ವಿಜಯನಗರ ಡಿಸಿ ಎಂ.ಎಸ್.ದಿವಾಕರ್, ಕೊಪ್ಪಳ ಡಿಸಿ ನಲಿನ್ ಅತುಲ್, ಜಿಪಂ ಸಿಇಒ ನೊಂಗ್ಜಾಯ್ ಮೊಹಮ್ಮದ್ ಅಲಿ ಅಕ್ರಂ ಶಾ, ರಾಹುಲ್ ರತ್ನಂ ಪಾಂಡೆಯ, ಬಳ್ಳಾರಿ ವಲಯದ ಪೊಲೀಸ್ ಮಹಾ ನಿರೀಕ್ಷಕ ಲೋಕೇಶ್ ಕುಮಾರ್, ವಿಜಯನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಹರಿಬಾಬು ಬಿ.ಎಲ್. ಇತರರಿದ್ದರು.

# ಅಂಗನವಾಡಿ ಕಾರ್ಯಕರ್ತೆ ಹುದ್ದೆಗಳಿಗೆ ಅರ್ಜಿ ಆಹ್ವಾನ

■ ಹಂಪಿ ಟೈಮ್ ಬಳ್ಳಾರಿ

ಗ್ರಾಮಾಂತರ ಶಿಶು ಅಭಿವೃದ್ಧಿ ಯೋಜನೆಯಡಿ ಬಳ್ಳಾರಿ ತಾಲ್ಲೂಕಿನ ವಿವಿಧ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 18 ಅಂಗನವಾಡಿ ಕಾರ್ಯಕರ್ತೆ, 34 ಅಂಗನವಾಡಿ ಸಹಾಯಕಿಯರ ಗೌರವ ಸೇವೆ ಹುದ್ದೆಗಳಿಗೆ ಹೊಸ ಅಧಿಸೂಚನೆಯನ್ವಯ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಬಳ್ಳಾರಿ ತಾಲ್ಲೂಕಿನ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿನ ಅಂಗನವಾಡಿ ಸಹಾಯಕಿಯರ ಹುದ್ದೆಯ ಅಧಿಸೂಚನೆ ರದ್ದಾಗಿದ್ದು, ಪ್ರಸ್ತುತ ಆ.12 ರಂದು ಹೊಸ ಅಧಿಸೂಚನೆ ಹೊರಡಿಸಲಾಗಿದ್ದು, ಆ.10 ರಿಂದ 12 ರ ವರೆಗೆ ಸಹಾಯಕಿಯರ ಹುದ್ದೆಗಳಿಗೆ ಸಲ್ಲಿಸಿದ ಬಳ್ಳಾರಿ ತಾಲ್ಲೂಕಿನ ಅಭ್ಯರ್ಥಿಗಳು ಹೊಸ ಅಧಿಸೂಚನೆಯನ್ವಯ ಪುನಃ ಅರ್ಜಿ ಸಲ್ಲಿಸಬೇಕು. ಈ ಹಿಂದೆ ಸಲ್ಲಿಸಿದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ಅಂಗನವಾಡಿ ಕಾರ್ಯಕರ್ತೆಯರ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಸೆ.10 ಕೊನೆಯ ದಿನ. ಅಂಗನವಾಡಿ ಸಹಾಯಕಿಯರ ಹುದ್ದೆಗಳಿಗೆ ಸೆ.13 ರಂದು ಅರ್ಜಿ ಸಲ್ಲಿಸಲು ಕೊನೆಯ ದಿನವಾಗಿದೆ.

ಹುದ್ದೆಗಳ ವಿವರ ಹಾಗೂ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ವೆಬ್‌ಸೈಟ್ https://karnemakaone.kar.nic.in/abcd/ ಗೆ ಭೇಟಿ ನೀಡಬಹುದು.

ಹೆಚ್ಚಿನ ಮಾಹಿತಿಗಾಗಿ ದೇವಿನಗರದ ಸ್ತ್ರೀಸೇವಾ ನಿಕೇತನಾ ಆವರಣದ ಬಳ್ಳಾರಿ ಗ್ರಾಮಾಂತರ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿ ಅಥವಾ ದೂ.08392 – 266080 ಗೆ ಸಂಪರ್ಕಿಸಬಹುದು ಎಂದು ಶಿಶು ಅಭಿವೃದ್ಧಿ ಯೋಜನಾಧಿಕಾರಿ ಮೋಹನಕುಮಾರಿ.ವಿ ತಿಳಿಸಿದ್ದಾರೆ.

14 ಭಾಷೆಗಳಲ್ಲಿ
ಹಂಪಿ ಟೈಮ್ಸ್ ವೆಬ್‌ನ್ಯೂಸ್‌ಗೆ
ಭೇಟಿ ನೀಡಿ, ನಿಮ್ಮ ಮಾತೃಭಾಷೆಯಲ್ಲಿ
ಸುದ್ದಿ, ಲೇಖನ ಓದಿರಿ...
www.hampitimes.com

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.

## ನಿತ್ಯ ಪಂಚಾಂಗ

ಮಾಸ: ಶ್ರಾವಣ । ಸಂವತ್ಸರ: ಕ್ರೋಧಿ

**14–08–2024 – ಬುಧವಾರ**

| | |
|---|---|
| ತಿಥಿ | : ನವಮಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಅನುರಾಧ |
| ಯೋಗ | : ಇಂದ್ರ |
| ಕರಣ | : ಕೌಳವ |
| ಸೂರ್ಯೋದಯ | : 06:04:04 |
| ಸೂರ್ಯಾಸ್ತ | : 18:58:41 |
| ರಾಹು ಕಾಲ | : 12:31–14:08 |
| ಯಮಘಂಡ ಕಾಲ | : 07:41–09:18 |
| ಗುಳಿಕ ಕಾಲ | : 10:55–12:31 |

## ತುಂಗಭದ್ರಾ ನೀರಿನ ಮಟ್ಟ



ಮಂಗಳವಾರ : 13–08–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1629.26 ಅಡಿ |
| ಒಳ ಹರಿವು | 35425 ಕ್ಯುಸೆಕ್ |
| ಹೊರ ಹರಿವು | 109526 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 91.311 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1628.70 ಅಡಿ |
| ಒಳ ಹರಿವು | 11987 ಕ್ಯುಸೆಕ್ |
| ಹೊರ ಹರಿವು | 11546 ಕ್ಯುಸೆಕ್ |
| ಸಾಮರ್ಥ್ಯ | 89.262 ಟಿಎಂಸಿ |

# ಅರಸು ಕರ್ನಾಟಕದ ಅಪರೂಪದ ರಾಜಕಾರಣಿ

## ಅರಸು ಜಯಂತಿ ಪೂರ್ವಭಾವಿ ಸಭೆಯಲ್ಲಿ ತಹಶೀಲ್ದಾರ್ ಎಂ.ರೇಣುಕಾ ಅಭಿಮತ

■ ಹಂಪಿ ಟೈಮ್ಸ್ ಕೂಡ್ಲಿಗಿ

ಪಟ್ಟಣದ ತಾಲೂಕು ಕಚೇರಿಯಲ್ಲಿ ಮಂಗಳವಾರ ತಾಲೂಕು ಆಡಳಿತ ಹಾಗೂ ಬಿಸಿಎಂ ಇಲಾಖೆ ವತಿಯಿಂದ ಮಾಜಿ ಮುಖ್ಯಮಂತ್ರಿ ದಿ.ದೇವರಾಜ ಅರಸು ಜಯಂತಿ ಪೂರ್ವಭಾವಿ ಸಭೆ ಏರ್ಪಡಿಸಲಾಗಿತ್ತು.

ತಹಸೀಲ್ದಾರ್ ಎಂ.ರೇಣುಕಾ ಮಾತನಾಡಿ, ದೇವರಾಜ ಅರಸು ಅವರನ್ನು ಸಾಮಾಜಿಕ ನ್ಯಾಯದ ಹರಿಕಾರ ಎಂದು ಕರೆಯುತ್ತೇವೆ. ದೇವರಾಜ ಅರಸು ಕರ್ನಾಟಕದ ಅಪರೂಪದ ರಾಜಕಾರಣಿ. ಅರಸು ಬಡವರು, ಸಾಮಾಜಿಕ ನ್ಯಾಯದ ಪರವಾಗಿ ಇದ್ದರು.

ಅರಸು ಅವರು ಅಧಿಕಾರಕ್ಕೆ ಬರುವವರೆಗು ಹಿಂದುಳಿದ ವರ್ಗದವರಿಗೆ ಮೀಸಲಾತಿ ಇರಲಿಲ್ಲ. ಹಾವನೂರು ಆಯೋಗ ವರದಿಯನ್ನು ಜಾರಿ ಮಾಡಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಜಾರಿ ಮಾಡಿದ್ದು ಇತಿಹಾಸ. ಆದ್ದರಿಂದ ಇಂತಹ ಮಹನೀಯರ ಆದರ್ಶ ಹಾಗೂ ಅವರ ಕಾರ್ಯ ವೈಖರಿ ನಮಗೆ ದಾರಿದೀಪವಾಗಬೇಕು ಎಂದರು.

ಇದೇ 20 ರಂದು ತಾಲೂಕು ಆಡಳಿತ ಹಾಗೂ ಬಿಸಿಎಂ ಇಲಾಖೆವತಿಯಿಂದ ಪಟ್ಟಣದ ಗಾಂಧಿ ಚಿತಾಭಸ್ಮವಿರುವ ಹುತಾತ್ಮರ ಸ್ಮಾರಕದಿಂದ ಅಲಂಕೃತ ವಾಹನದಲ್ಲಿ ದಿ.ದೇವರಾಜ ಅರಸು ಭಾವಚಿತ್ರಕ್ಕೆ ಪೂಜೆ ಸಲ್ಲಿಸುವ ಮೂಲಕ ಮೆರವಣಿಗೆಗೆ ಚಾಲನೆ ನೀಡಲಾಗುವುದು.




ನಂತರ ನಾನಾ ಮಂಗಳ ವಾದ್ಯ,ಮೇಳಗಳ ಮೂಲಕ ಮದಕರಿ ವೃತ್ತ, ಅಂಬೇಡ್ಕರ್ ವೃತ್ತದ ಮೂಲಕ ಅಂಬೇಡ್ಕರ್ ಭವನಕ್ಕೆ ಆಗಮಿಸಿ, ವೇದಿಕೆ ಕಾರ್ಯಕ್ರಮ ಆಯೋಜನೆ ಮಾಡ ಲಾಗಿದ್ದು, ತಾಲೂಕಿನ ವಿವಿಧ ಗಣ್ಯರು, ತಾಲೂಕು ಮಟ್ಟದ ಅಧಿಕಾರಿಗಳು ಜಯಂತಿ ಕಾರ್ಯ ಕ್ರಮದಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕು.

ವೇದಿಕೆ ಕಾರ್ಯಕ್ರಮದಲ್ಲಿ ಮಾಜಿ ಮುಖ್ಯಮಂತ್ರಿ ದಿ. ದೇವರಾಜ ಅರಸು ಕುರಿತು ಮಾತನಾಡಿ, ವಿಧ್ಯಾರ್ಥಿಗಳಿಗೆ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಿ ಗೆದ್ದ ವಿಧ್ಯಾರ್ಥಿಗಳಿಗೆ ಬಹುಮಾನ ವಿತರಣೆ ಮಾಡಲಾಗುತ್ತದೆ ಎಂದು ತಿಳಿಸಿದರು. ಅರಸು ಜಯಂತಿ ದಿನದಂದು ಪಟ್ಟಣದ ಎಲ್ಲಾ ತಾಲೂಕು ಕಚೇರಿ ಹಾಗೂ ಶಾಲಾ, ಕಾಲೇಜುಗಳಲ್ಲಿ ಅರಸು ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಕಡ್ಡಾಯವಾಗಿ ಜಯಂತಿ ಆಚರಿಸಲು ಸೂಚಿಸಿದರು.

ಬಿಇಓ ಪದ್ಮನಾಭ ಕರಣಂ, ಸರ್ಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷ ಪಿ.ಶಿವರಾಜ್, ಟಿಎಚ್‌ಓ ಡಾ.ಎಸ್.ಪಿ.ಪ್ರದೀಪ್ ಕುಮಾರ್, ಎಸ್ಟಿ ಅಧಿಕಾರಿ ಮೆಹಬೂಬ್ ಬಾಷ, ಕಾರ್ಮಿಕ ಇಲಾಖೆ ಅಧಿಕಾರಿ ಮಂಜುಳ ವಿಶ್ವನಾಥ, ಅರಣ್ಯ ಅಧಿಕಾರಿ ಬಿ.ಎಸ್.ಮಂಜುನಾಥ, ಶ್ರೀಮತಿ ಅಂಗಡಿ ವೀರಮ್ಮ,ತಿರುಕಪ್ಪ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾಚಾರ್ಯ ಎನ್.ಕಲ್ಲಪ್ಪ, ಸಿರಬಿ ಅಂಜಿನಪ್ಪ ಸೇರಿದಂತೆ ತಾಲೂಕು ಮಟ್ಟದ ಅಧಿಕಾರಿಗಳು ಇದ್ದರು.

# ತುಂಗಭದ್ರಾ ಅಣೆಕಟ್ಟಿನ ಎಡಭಾಗ, ಅತೀ ಸೂಕ್ಷ್ಮ ಪ್ರದೇಶಗಳಲ್ಲಿ ನಿಷೇದಾಜ್ಞೆ ಜಾರಿ

■ ಹಂಪಿ ಟೈಮ್ಸ್ ಕೊಪ್ಪಳ

ತುಂಗಭದ್ರಾ ಅಣೆಕಟ್ಟಿನ ಎಡಭಾಗ ಮತ್ತು ಅತೀ ಸೂಕ್ಷ್ಮ ಪ್ರದೇಶಗಳಲ್ಲಿ ನಿಷೇದಾಜ್ಞೆಯನ್ನು ಜಾರಿಗೊಳಿಸಿ ಜಿಲ್ಲಾಧಿಕಾರಿಗಳಾದ ನಲಿನ್ ಅತುಲ್ ಅವರು ಆದೇಶ ಹೊರಡಿಸಿದ್ದಾರೆ.

ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ 2023ರ ಕಲಂ 163 ರನ್ವಯ ತುಂಗಭದ್ರಾ ಜಲಾಶಯದ ರಕ್ಷಣೆ ಹಾಗೂ ಸಾರ್ವಜನಿಕರ ಸುರಕ್ಷತೆ ಹಿತದೃಷ್ಟಿಯಿಂದ ಆಗಸ್ಟ್ 11 ರಿಂದ ಆ.20ರ ಮಧ್ಯರಾತ್ರಿಯವರೆಗೆ ತುಂಗಭದ್ರಾ ಜಲಾಶಯದ ಡೌನ್ ಸ್ಟ್ರೀಮ್‌ನಲ್ಲಿರುವ ಲೋವರ್ ಬ್ರಿಡ್ಜ್ ಮತ್ತು ತುಂಗಭದ್ರಾ ಅಣೆಕಟ್ಟಿನ ಕೆಳಭಾಗದಲ್ಲಿ ಬರುವ ಎಲ್ಲಾ ಗ್ರಾಮಗಳ ಸುತ್ತಮುತ್ತಲಿನ 100 ಮೀಟರ್ ಪ್ರದೇಶದ ವ್ಯಾಪ್ತಿಯಲ್ಲಿ ನಿಷೇದಾಜ್ಞೆಯನ್ನು ಜಾರಿಗೊಳಿಸಲಾಗಿದೆ ಎಂದು ಜಿಲ್ಲಾಧಿಕಾರಿಗಳು ಆದೇಶದಲ್ಲಿ ತಿಳಿಸಿದ್ದಾರೆ.

# ಕಲೆಗಳಿಂದ ವ್ಯಕ್ತಿತ್ವ ನಿರ್ಮಾಣ

## ಸಾಹಿತಿ ಸಿದ್ದರಾಮ ಕಲ್ಮಠ ಅಭಿಮತ

■ ಹಂಪಿ ಟೈಮ್ಸ್ ಬಳ್ಳಾರಿ

ಸಾಂಸ್ಕೃತಿಕ ಚಟುವಟಿಕೆಗಳು ವಿದ್ಯಾರ್ಥಿಗಳಲ್ಲಿ ಅಡಗಿರುವ ಪ್ರತಿಭೆಯನ್ನು ಹೊರತರಲು, ಪಠ್ಯೇತರ ಚಟುವಟಿಕೆಗಳನ್ನು ಉತ್ತೇಜಿಸಲು ಪೂರಕವಾಗಿದ್ದು, ವಿಶ್ವವಿದ್ಯಾಲಯದ ಸಾಂಸ್ಕೃತಿಕ ವೇದಿಕೆಗಳು ವಿದ್ಯಾರ್ಥಿಗಳ ವ್ಯಕ್ತಿತ್ವ ನಿರ್ಮಿಸಲು ಸೂಕ್ತವಾಗಿವೆ ಎಂದು ಜಿಲ್ಲಾ ಕನ್ನಡ ಸಾಹಿತ್ಯ ಮಾಜಿ ಅಧ್ಯಕ್ಷರು ಹಾಗೂ ಸಾಹಿತಿ ಸಿದ್ದರಾಮ ಕಲ್ಮಠ ಅಭಿಪ್ರಾಯಪಟ್ಟರು.

ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ ಡಾ.ಬಿ.ಆರ್. ಅಂಬೇಡ್ಕರ್ ಸಭಾಂಗಣದಲ್ಲಿ ಸೋಮವಾರ ಏರ್ಪಡಿಸಿದ್ದ ಎರಡು ದಿನಗಳ 'ಅಂತರ್‌ವಿಭಾಗೀಯ ಯುವಜನೋತ್ಸವ–2024' ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಪ್ರಪಂಚದಲ್ಲಿ ವಿಶಿಷ್ಟವಾದ ಸಾಂಸ್ಕೃತಿಕ ನೆಲೆಗಟ್ಟುಗಳನ್ನು ಭಾರತದಲ್ಲಿ ಮಾತ್ರ ಕಾಣಬಹುದಾಗಿದೆ. ವಿದ್ಯಾರ್ಥಿಗಳು ಸಾಂಸ್ಕೃತಿಕ ಮನೋಭಾವನೆಯಿಂದಾಗಿ ಸಮಾಜದಲ್ಲಿ ಸ್ಥಿರವಾಗಿ ನಿಲ್ಲುತ್ತಾರೆ ಎಂದರು.

ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ.ಜೆ.ತಿಪ್ಪೇರುದ್ರಪ್ಪ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿದರು. ವಿಶ್ವವಿದ್ಯಾಲಯದ ಕುಲಸಚಿವ ರುದ್ರೇಶ.ಎಸ್. ಎನ್ ಉಪಸ್ಥಿತರಿದ್ದರು. ಸಾಂಸ್ಕೃತಿಕ ಸಂಚಾಲಕ ಪ್ರೊ.ಶಿರಗಾನಹಳ್ಳಿ ಶಾಂತನಾಯ್ಕ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಅಂತರ್‌ವಿಭಾಗೀಯ ಯುವಜನೋತ್ಸ ವದಲ್ಲಿ ವಿದ್ಯಾರ್ಥಿಗಳಿಗಾಗಿ 20 ವಿವಿಧ ಸ್ಪರ್ಧೆಗಳನ್ನು ಆಯೋಜಿಸಲಾಗಿದ್ದು, ಸುಮಾರು 100ಕ್ಕೂ ಹೆಚ್ಚು ವಿದ್ಯಾರ್ಥಿಗಳು ಸ್ಪರ್ಧೆಗಳಲ್ಲಿ ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ಸಹಾಯಕ ಪ್ರಾಧ್ಯಾಪಕರಾದ ಡಾ.ಶಿವಪ್ರಕಾಶ, ಡಾ. ಅಣ್ಣಾಜಿ ಕೃಷ್ಣರೆಡ್ಡಿ ಸೇರಿದಂತೆ ವಿವಿಧ ನಿಕಾಯದ ಡೀನರು, ವಿಭಾಗಗಳ ಮುಖ್ಯಸ್ಥರು, ಸಂಯೋಜಕರು, ಬೋಧಕ–ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಪ್ರವಾಸಿ ಮಾರ್ಗದರ್ಶಿ ತರಬೇತಿ: ಅರ್ಜಿ ಆಹ್ವಾನ

■ ಹಂಪಿ ಟೈಮ್ಸ್ ಕೊಪ್ಪಳ

ಪ್ರವಾಸೋದ್ಯಮ ಇಲಾಖೆಯಿಂದ 2024–25ನೇ ಸಾಲಿನ ಕೊಪ್ಪಳ ಜಿಲ್ಲೆಯ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ, ಹಿಂದುಳಿದ/ಅಲ್ಪಸಂಖ್ಯಾತರ ವರ್ಗಕ್ಕೆ ಸೇರಿದ ವಿದ್ಯಾವಂತ ನಿರುದ್ಯೋಗಿ ಅಭ್ಯರ್ಥಿಗಳಿಗೆ ಪ್ರವಾಸಿ ಮಾರ್ಗದರ್ಶಿ ತರಬೇತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. ಪ್ರವಾಸಿಗರಿಗೆ ಜಿಲ್ಲೆಯ ಐತಿಹಾಸಿಕ, ಧಾರ್ಮಿಕ ಸಾಹಿತ್ಯಕ್ಕೆ, ಸಾಂಸ್ಕೃತಿಕ ಹಾಗೂ ಕಲಾವೈವಿದ್ಯತೆಗಳನ್ನು ಒಳಗೊಂಡ ಸೃಜನಶೀಲತೆಗಳ ಬಗ್ಗೆ ಸಂಪೂರ್ಣ ಮಾಹಿತಿಯನ್ನು ನೀಡಲು ಅಂದರೆ 'ಒಂದು ರಾಜ್ಯ ಹಲವು ವಿಸ್ಮಯಗಳು' ಎಂಬುದನ್ನು ಪರಿಚಯಿಸಲು ಪ್ರವಾಸಿ ಮಾರ್ಗದರ್ಶಿ ತರಬೇತಿಯನ್ನು ನೀಡಲಾಗುವುದು.

ಅರ್ಜಿ ಸಲ್ಲಿಸಲು ಸೆ. 10 ಕೊನೆಯ ದಿನ. ಅರ್ಜಿ ಸಲ್ಲಿಸುವ ಅಭ್ಯರ್ಥಿಯು ಸಾಮಾನ್ಯ, ಹಿಂದುಳಿದ, ಅಲ್ಪಸಂಖ್ಯಾತ ವರ್ಗದವರಿಗೆ ವಯೋಮಿತಿ ಕನಿಷ್ಠ 21 ವರ್ಷ ಹಾಗೂ ಗರಿಷ್ಠ 45 ವರ್ಷಗಳು, ಪರಿಶಿಷ್ಟ ಜಾತಿ ಮತ್ತು ಪಂಗಡದ ಹಾಗೂ ವಿಧವೆ ಅಭ್ಯರ್ಥಿಗಳಿಗೆ ಕನಿಷ್ಠ 21 ವರ್ಷ ಮತ್ತು ಗರಿಷ್ಠ 48 ವರ್ಷ ವಯೋಮಿತಿಯಲ್ಲಿರಬೇಕು. ಅರ್ಜಿಯನ್ನು ಪ್ರವಾಸೋದ್ಯಮ ಇಲಾಖೆ, ಕೊಪ್ಪಳ ಕಛೇರಿಯಿಂದ ಪಡೆದು ಭರ್ತಿ ಮಾಡಿ, ಅರ್ಜಿಯೊಂದಿಗೆ ಲಗತ್ತಿಸಬೇಕಾದ ದಾಖಲೆಗಳನ್ನು ಸ್ವಯಂ ದೃಢೀಕರಿಸಿ ಕಚೇರಿಗೆ ಸಲ್ಲಿಸಬೇಕು. ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.


ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರ ಕಛೇರಿ, ಪ್ರವಾಸೋದ್ಯಮ ಇಲಾಖೆ, 2ನೇ ಮಹಡಿ, ಜಿಲ್ಲಾಡಳಿತ ಭವನ, ಹೊಸಪೇಟೆ ರಸ್ತೆ, ಕೊಪ್ಪಳ ಜಿಲ್ಲೆ–583231, ಈ ವಿಳಾಸಕ್ಕೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ

# ಇಂದು ಲಕ್ಷ ದೀಪೋತ್ಸವ ಹಸಿರೋತ್ಸವಕ್ಕೆ ಚಾಲನೆ

■ ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ

ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಇಂದು ಬುಧವಾರ ಬೆಳಗ್ಗೆ 9ಗಂಟೆಗೆ ಹಸಿರೋತ್ಸವಕ್ಕೆ ಸಸಿ ನೆಡುವ ಮೂಲಕ ಚಾಲನೆ ನೀಡಲಾಗುವುದು ಎಂದು ಶಾಸಕ ಕೆ.ನೇಮಿರಾಜ್‌ನಾಯ್ಕ್ ತಿಳಿಸಿದರು.

ಪಟ್ಟಣದಲ್ಲಿ ಸುದ್ದಿಗಾರರೊಂದಿಗೆ ಅವರು ಮಾತನಾಡಿ, ಪಟ್ಟಣದ ಗಂಗಾವತಿ ವೆಂಕಟರಮಣ ಪಂಚರತ್ನಮ್ಮ ಪದ್ಮಾವತೆಮ್ಮನವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜ್ ಆವರಣದಲ್ಲಿ, ಬೆಳಗ್ಗೆ 9ಗಂಟೆಗೆ ಸಸಿಗಳನ್ನು ನೆಟ್ಟು ಕ್ಷೇತ್ರಾದ್ಯಂತ 1ಲಕ್ಷ ಸಸಿ ನೆಡುವ ಮೂಲಕ ಹಸಿರೋತ್ಸವ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗುವುದು. ಕ್ಷೇತ್ರಾದ್ಯಂತ ಸರ್ಕಾರಿ ಕಚೇರಿಯ ಆವರಣದಲ್ಲಿ ಕರ್ತವ್ಯ ನಿರ್ವಹಿಸುವ ಸ್ಥಳದಲ್ಲಿಯೇ ಸಸಿಗಳನ್ನು ನೆಡಲಾಗುತ್ತೆ. ಅಲ್ಲದೆ, ಆಯಾ ಶಾಲಾ ಕಾಲೇಜ್ ವಿದ್ಯಾರ್ಥಿಗಳಿಗೆ ಸಸಿಗಳನ್ನು ಕೊಟ್ಟು ಕಳಿಸುವ ಮೂಲಕ ಪ್ರತಿಯೊಂದು ಮನೆಮನೆಯಲ್ಲೂ ಸಸಿಗಳನ್ನು ನೆಟ್ಟು ಹಸಿರೋತ್ಸವ ಆಚರಣೆ ಮಾಡಬೇಕು ಎನ್ನುವ ನಿರ್ದೇಶನ ನೀಡಲಾಗಿದೆ ಮತ್ತು ಸಾರ್ವಜನಿಕರೇ ಪಾಲ್ಗೊಳ್ಳಿ ಎಂದು ಮನವಿ ಮಾಡಕೊಳ್ಳಲಾಗುತ್ತಿದೆ ಎಂದರು.



ಸಂಜೆ 7ಗಂಟೆಗೆ ಇಲ್ಲಿಯ ಜೆಸ್ಕಾಂ ಇಲಾಖೆಯ ಪಂಚಮುಖಿ ಗಣೇಶ ದೇಗುಲದ ಆವರಣದಲ್ಲಿ ದೀಪ ಬೆಳಗುವ ಮೂಲಕ ಸ್ವಾತಂತ್ರೋತ್ಸವ ದಿನಾಚರಣೆಯನ್ನು ಸ್ವಾಗತಿಸಲಾಗುತ್ತಿದೆ.ಕ್ಷೇತ್ರಾದ್ಯಂತ ಕಾರ್ಯಕ್ರಮವಾಗಿದ್ದು, ಪ್ರತಿ ಮನೆಮನೆ ಯಲ್ಲೂ ಈ ದೀಪ ಬೆಳಗಿಸಿ ದೇಶಕ್ಕೂ ಮತ್ತು ದೇಶದ ಸೈನಿಕರಿಗೂ ಗೌರವ ಸಲ್ಲಿಸೋಣ ಎಂದರು. ಇದರಲ್ಲಿಯೂ ಎಲ್ಲಾ ಸರ್ಕಾರಿ ಅಧಿಕಾರಿಗಳು ಮತ್ತು ಸಂಘ ಸಂಸ್ಥೆಗಳು ಹಾಗೂ ಸಾರ್ವಜನಿಕರು ಕೂಡ ಭಾಗವ ಹಿಸಲಿವೆ ಎಂದರು.

## ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಹೊಸಪೇಟೆ ಉಪ ವಿಭಾಗ, ಹೊಸಪೇಟೆ. ಇವರ ನ್ಯಾಯಾಲಯದಿಂದ

**ಕರ್ನಾಟಕ ರಾಜ್ಯ ಸಹಕಾರಿ ವಸತಿ ಮಹಾಮಂಡಲ ನಿ., ನಂ. 3, ಎಸ್. ಕರಿಯಪ್ಪ ರಸ್ತೆ, ಬಸವನಗುಡಿ, ಬೆಂಗಳೂರು – 560 004.**

**ಸ್ಥಿರ ಸ್ವತ್ತುಗಳ ಬಹಿರಂಗ ಹರಾಜು ನೋಟೀಸ್**

ಈ ಮೂಲಕ ಸಮಸ್ತ ಜನರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ನಮೂದಿಸಿರುವ ಬಾಕಿದಾರರು ಬಾಪೂಜಿ ನಗರ ಗೃಹ ನಿರ್ಮಾಣ ಸಹಕಾರ ಸಂಘ ನಿ., ಹಗರಿಬೊಮ್ಮನಹಳ್ಳಿ ಸಂಘದ ಮುಖಾಂತರ ಕರ್ನಾಟಕ ರಾಜ್ಯ ಸಹಕಾರಿ ವಸತಿ ಮಹಾಮಂಡಲದಲ್ಲಿ ಸಾಲ ಪಡೆದು ಸಕಾಲದಲ್ಲಿ ಕಂತು ಪಾವತಿ ಮಾಡದೇ ಇರುವುದರಿಂದ ಸದರಿಯವರ ಮೇಲೆ ದಾವಾ ಹಾಕಿ ಡಿಕ್ರಿಯಾಗಿರುತ್ತದೆ. ಸದರಿ ಡಿಕ್ರಿ ಹಣದ ವಸೂಲಿಗಾಗಿ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಹೊಸಪೇಟೆ ಉಪ ವಿಭಾಗ, ಹೊಸಪೇಟೆ ಇವರು ಈ ಕೆಳಕಂಡ ದಿನದಲ್ಲಿ ಸಾಲಕ್ಕೆ ಆಧಾರ ಮಾಡಿರುವ ಸ್ಥಿರ ಸ್ವತ್ತನ್ನು ಬಹಿರಂಗ ಹರಾಜು ಮಾಡಲು ದಿನಾಂಕ ನಿಗಧಿ ಮಾಡಿರುತ್ತಾರೆ. ಆದ್ದರಿಂದ ಸಾಲದ ಬಾಕಿ ಬಗ್ಗೆ ಸಾಲಕ್ಕೆ ಈಡು ಮಾಡಿರುವ ಸ್ವತ್ತುಗಳನ್ನು ಸಹಕಾರಿ ಕಾಯ್ದೆ ಅನುಸಾರ ಕೆಳಗೆ ನಮೂದಿಸಿರುವ ಷೆಡ್ಯೂಲ್ ಸ್ವತ್ತನ್ನು "ಬಹಿರಂಗ ಹರಾಜು" ನಡೆಸಲಾಗುತ್ತದೆ. ಸಾಲಕ್ಕೆ ಈಡು ಮಾಡಿರುವ ಸ್ವತ್ತು ಒಳ್ಳೆಯ ಆಯಕಟ್ಟಿನಲ್ಲಿದ್ದು ಉತ್ತಮವಾದ ಆಸ್ತಿಯಾಗಿರುತ್ತದೆ. ಸಾರ್ವಜನಿಕರು ಛಡ ಸವಾಲಿನಲ್ಲಿ ಬಿಡ್ ಮಾಡಿ ಪಡೆಯಬಹುದು.

**' ಸ್ವತ್ತಿನ ವಿವರ '**

| ಕ್ರ. ಸಂ | ಬಾಕಿದಾರರ ಹೆಸರು | ದಾವ ನಂ. ಸಿ.ಇ.ಪಿ. ನಂ. | ಖಾತಾ / ಸೈಟ್ ನಂ. | ಚೆಕ್ ಬಂದಿ | ವಸೂಲಿಯಾಗ ಬೇಕಾದ ಮೊಬಲಗು | ಹರಾಜು ದಿನಾಂಕ ವಾರ, ಸಮಯ ಹಾಗೂ ಸ್ಥಳ |
|---|---|---|---|---|---|---|
| 1 | 1) ಶ್ರೀ ಹೆಚ್. ವೀರಭದ್ರಪ್ಪ ತಂದೆ ಹೆಚ್. ಭರ್ಮಪ್ಪ (ಪೌತಿ) ವಾರಸುದಾರರಾದ 2) ಶ್ರೀಮತಿ ಹಾಲಮ್ಮ ಕೋಂ ಲೇಟ್ ಹೆಚ್. ವೀರಭದ್ರಪ್ಪ, 3) ಶ್ರೀ ಹಾಲೇಶ್ ಕುಮಾರ್ ಬಿನ್ ಲೇಟ್ ಹೆಚ್. ವೀರಭದ್ರಪ್ಪ, 4)ಶ್ರೀ ಸಂತೋಷ್ ಕುಮಾರ್ ಬಿನ್ ಲೇಟ್ ಹೆಚ್. ವೀರಭದ್ರಪ್ಪ, | ದಾವ ಸಂಖ್ಯೆ: ಅನಿ (ವ&ಇ) ಡಿ6/ ಡಿಐಎಸ್ /158/2015–16 ಸಿ.ಇ.ಪಿ .ನಂ. ಸನಿ23/05/ –2016 2017 | ಖಾತ ನಂ.100, ಕಡಲಬಾಳು ಗ್ರಾಮ, ಹಗರಿಬೊಮ್ಮನಹಳ್ಳಿ ತಾಲ್ಲೂಕು, ವಿಜಯನಗರ ಜಿಲ್ಲೆ. | ಪೂರ್ವಕ್ಕೆ : ರಸ್ತೆ ಪಶ್ಚಿಮಕ್ಕೆ : ವೆಂಟಿ ಕೊಟ್ರಪ್ಪರವರ ಮನೆ. ಉತ್ತರಕ್ಕೆ : ಹೆಚ್.ಗುರುಸಿದ್ದಪ್ಪ ರವರ ಮನೆ. ದಕ್ಷಿಣಕ್ಕೆ : ಖಾಲಿ ನಿವೇಶನ ಪೂ–ಪ: 31.6 ಅಡಿ, ಉ–ದ: 18 ಅಡಿ. ಒಟ್ಟು 568.8 ಚ.ಅಡಿ. | ದಿನಾಂಕ: 30.06.2024ಕ್ಕೆ ರೂ.9,87,991/– + ಬಡ್ಡಿ + ಜಾಹಿರಾತು ವೆಚ್ಚ + ಇತರೆ | ದಿನಾಂಕ: 21–08–2024 ಬುಧವಾರದಂದು ಬೆಳಗ್ಗೆ 11.30 ಘಂಟೆಗೆ ಸ್ವತ್ತಿನ ಮುಂಭಾಗ ಖಾತಾ ನಂ.100, ಕಡಲಬಾಳು ಗ್ರಾಮ, ಹಗರಿಬೊಮ್ಮನಹಳ್ಳಿ ತಾಲ್ಲೂಕು, ವಿಜಯನಗರ ಜಿಲ್ಲೆ. |

ದಿನಾಂಕ : 12–08–2024.
ಸ್ಥಳ : ಹೊಸಪೇಟೆ
ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ: 080–26604481 (ಕಛೇರಿ)
9008723925 (ಮಾರಾಟಾಧಿಕಾರಿ)

ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಹೊಸಪೇಟೆ ಉಪ ವಿಭಾಗ, ಹೊಸಪೇಟೆ ರವರ ಅಪ್ಪಣೆ ಮೇರೆಗೆ ಸಹಿ/–
ಮಾರಾಟಾಧಿಕಾರಿಗಳು
ಕರ್ನಾಟಕ ರಾಜ್ಯ ಸಹಕಾರಿ ವಸತಿ ಮಹಾಮಂಡಲ ನಿ., ಬೆಂಗಳೂರು

**–: ಷರತ್ತುಗಳು :–**

(1) ಹರಾಜಿಗೆ ಮುನ್ನಾ ವಸತಿ ಮಹಾಮಂಡಲಕ್ಕೆ ಬರಬೇಕಾದ ಹಣ ಮರುಪಾವತಿಯಾದಲ್ಲಿ ಸದರಿಯವರ ಸ್ವತ್ತನ್ನು ಹರಾಜು ಮಾಡಲಾಗುವುದಿಲ್ಲ.

(2) ಹರಾಜಿನಲ್ಲಿ ಭಾಗವಹಿಸಲಿಚ್ಛಿಸುವವರು ಹರಾಜು ಪ್ರಾರಂಭವಾಗುವ ಮೊದಲು ರೂ.50,000/– ಗಳನ್ನು ಕರ್ನಾಟಕ ರಾಜ್ಯ ಸಹಕಾರ ವಸತಿ ಮಹಾಮಂಡಲ ನಿ., ಬೆಂಗಳೂರು ರವರ ಹೆಸರಿಗೆ ಡಿ.ಡಿ. ಅಥವಾ ನಗದು ಮೂಲಕ ಠೇವಣಿಯಾಗಿ ಪಾವತಿಸಿ ಬಿಡ್ ಮಾಡತಕ್ಕದ್ದು.

(3) ಹರಾಜಿನಲ್ಲಿ ಬಿಡ್ ನಿಂತ ತಕ್ಷಣ ಬಿಡ್ ಮೊಬಲಗಿನ ಶೇಕಡ 15 ರಷ್ಟು ಹಣವನ್ನು ಪಾವತಿ ಮಾಡಿ ರಸೀದಿ ಪಡೆಯುವುದು. ಉಳಿದ ಹಣವನ್ನು ನೋಂದಣಿ ವೆಚ್ಚ ಸಹಿತ ಬಿಡ್ ದಿನಾಂಕದಿಂದ 45 ದಿವಸದೊಳಗೆ ಪಾವತಿ ಮಾಡತಕ್ಕದ್ದು. ತಪ್ಪಿದಲ್ಲಿ ಬಿಡ್‌ದಾರರು ಪಾವತಿ ಮಾಡಿದ ಮೊಬಲಗನ್ನು ವಾಪಸ್ಸು ಮಾಡಲಾಗುವುದಿಲ್ಲ.

(4) ಹರಾಜಿಗಿಟ್ಟ ಸ್ಥಿರ ಸ್ವತ್ತಿನ ವಿವರಣೆ ಅಂದಾಜು ವಿಸ್ತೀರ್ಣದ ವಿಷಯದಲ್ಲಿ ಮಾಡಬಹುದಾದ ಯಾವುದಾದರು ತಪ್ಪುಗಳಿಗೆ ವಸತಿ ಮಹಾಮಂಡಲ/ಮಾರಾಟಾಧಿಕಾರಿ/ಸರ್ಕಾರದವರು ಜವಾಬ್ದಾರರಾಗುವುದಿಲ್ಲ.

(5) ಸವಾಲುದಾರರು ಹರಾಜನ್ನು ಪ್ರಾರಂಭಿಸುವುದಕ್ಕೆ ಮುನ್ನವೇ ಕಟ್ಟಡ/ಸ್ವತ್ತನ್ನು ಪರಿಶೀಲಿಸಿ ಹರಾಜಿನಲ್ಲಿ ಭಾಗವಹಿಸುವುದು.

(6) ಬಿಡ್ ಮೊಬಲಗು ವಸತಿ ಮಹಾಮಂಡಲಕ್ಕೆ ಬಾಕಿ ಇರುವ ಒಟ್ಟು ಸಾಲದ ಮೊತ್ತಕ್ಕಿಂತ ಕಡಿಮೆಯಾದಲ್ಲಿ ಸದರಿ ಹರಾಜನ್ನು ಒಪ್ಪುವುದು ಅಥವಾ ತಿರಸ್ಕರಿಸುವುದು ಕೆ.ಸಿ.ಎಸ್. ನಿಯಮದ ಪ್ರಕಾರ ಮಾರಾಟಾಧಿಕಾರಿ ರವರ ವಿವೇಚನೆಗೆ ಒಳಪಟ್ಟಿರುತ್ತದೆ.

(7) ಹರಾಜಿನಲ್ಲಿ ಯಾರು ಭಾಗವಹಿಸದಿದ್ದಲ್ಲಿ ಅಂತಹ ಆಸ್ತಿಯನ್ನು ವಸತಿ ಮಹಾಮಂಡಲದ ಹೆಸರಿಗೆ ಉಳಿಸಿಕೊಳ್ಳಲಾಗುವುದು. ಹಾಗೂ ಖಾತೆ ಬದಲಾವಣೆ ಮಾಡಲಾಗುವುದು.

(8) ಹರಾಜು ಮಾಡಲಾಗುವ ಆಸ್ತಿಯು ಹೇಗಿದೆಯೋ ಹಾಗೆ ಹರಾಜು ಮಾಡಲಾಗುವುದು.

(9) ಒಂದು ವೇಳೆ ಸದರಿ ಸ್ವತ್ತಿನ ಬಗ್ಗೆ ನ್ಯಾಯಾಲಯದಿಂದ ವ್ಯಾಜ್ಯವಾದಲ್ಲಿ/ತಡೆಯಾಜ್ಞೆ ಏನಾದರೂ ಬಂದಲ್ಲಿ ಬಿಡ್‌ದಾರರು ಪಾವತಿಸಿದ ಶೇಕಡ 15 ರಷ್ಟು ಮೊತ್ತಕ್ಕೆ ಬಡ್ಡಿ ನೀಡಲಾಗುವುದಿಲ್ಲ. ಹಾಗೂ ನ್ಯಾಯಾಲಯದ ತೀರ್ಪಿಗೆ ಸದರಿ ಹರಾಜು ಒಳಪಡುತ್ತದೆ.

## SSLC ಈ ಬಾರಿ ಫಲಿತಾಂಶ ನಮ್ಮದೆ ಹೈ ಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

Hampi Times Margadarshi — ಮನಸ್ಸು ಮಾಡು – ಕರ್ತವ್ಯ ನಿಷ್ಠನಾಗು – ಕಾದು ನೋಡು

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಗಣಿತ

### ವರ್ಗ ಸಮೀಕರಣಗಳು

**ವರ್ಗ ಸಮೀಕರಣದ ರೂಪದಲ್ಲಿ ವ್ಯಕ್ತಪಡಿಸಿ**

1) ಎರಡು ಅನುಕ್ರಮ ಧನ ಪೂರ್ಣಾಂಕಗಳ ಗುಣಲಬ್ಧವು 306 ಆಗಿದೆ. ಆ ಪೂರ್ಣಾಂಕಗಳು ಯಾವುವು?

ಪರಿಹಾರ : ಎರಡು ಧನ ಪೂರ್ಣಾಂಕಗಳು

$x$ ಮತ್ತು $x+1$

ಅವುಗಳ ಗುಣಲಬ್ಧವು = 306

$x(x+1) = 306$

ಬಿಡಿಸಿದಾಗ $\mathbf{x^2 + x - 306 = 0}$

ಅದೇ ರೀತಿ

2) ಎರಡು ಅನುಕ್ರಮ ಧನ ಪೂರ್ಣಾಂಕಗಳ ವರ್ಗಗಳ ಮೊತ್ತವು 365 ಆದರೆ ಆ ಸಂಖ್ಯೆಗಳನ್ನು ಕಂಡುಹಿಡಿಯಿರಿ.

3) ಎರಡು ಸಂಖ್ಯೆಗಳ ಮೊತ್ತ 27 ಮತ್ತು ಗುಣಲಬ್ಧ 182 ಆದರೆ ಆ ಸಂಖ್ಯೆಗಳನ್ನು ಕಂಡುಹಿಡಿಯಿರಿ.

4) ಒಂದು ಆಯತಾಕಾರದ ಮೈದಾನದ ಕರ್ಣವು ಅದರ ಚಿಕ್ಕ ಬಾಹುವಿಗಿಂತ 60m ಹೆಚ್ಚಾಗಿದೆ ದೊಡ್ಡ ಬಾಹುವು ಆ ಚಿಕ್ಕ ಬಾಹುವಿಗಿಂತ 30m ಹೆಚ್ಚಾಗಿದ್ದರೆ ಮೈದಾನದ ಬಾಹುಗಳ ಅಳತೆಗಳನ್ನು ಕಂಡುಹಿಡಿಯಿರಿ

ಸುಳುಹು:

ಮೈದಾನದ ಚಿಕ್ಕ ಬಾಹು $x$ ಆಗಿರಲಿ ಕರ್ಣದ ಉದ್ದ $x + 60$ ದೊಡ್ಡ ಬಾಹುವಿನ ಉದ್ದ $x + 30$

5) ಒಂದು ಆಯತಾಕಾರದ ಮೈದಾನದ ವಿಸ್ತೀರ್ಣ ಮತ್ತು ಸುತ್ತಳತೆಗಳು ಕ್ರಮವಾಗಿ 60 $m^2$ ಮತ್ತು 32ಮೀ ಆಗಿವೆ ಹಾಗಾದರೆ ಮೈದಾನದ ಉದ್ದ ಮತ್ತು ಅಗಲಗಳನ್ನು ಕಂಡುಹಿಡಿಯಿರಿ

**ಅಪವರ್ತನ ವಿಧಾನದಿಂದ ವರ್ಗ ಸಮೀಕರಣ ಬಿಡಿಸುವುದು**

$$2x^2 - 5x + 3 = 0$$

ಮೊದಲ ಮತ್ತು ಕೊನೆಯ ಪದಗಳನ್ನು ಗುಣಿಸಿ ಬಂದ ಗುಣಲಬ್ಧದ ಅಪವರ್ತನಗಳ ಮೊತ್ತ ಅಥವಾ ವ್ಯತ್ಯಾಸವು ಮಧ್ಯದ ಪದಕ್ಕೆ ಸಮವಾಗುವಂತೆ ತಗೆದುಕೊಳ್ಳಬೇಕು.

$2x^2 - 2x - 3x + 3 = 0$

$2x(x - 1) - 3(x - 1) = 0$

$(x-1)(2x-3) = 0$

$x - 1 = 0 \qquad 2x - 3 = 0$

$\mathbf{x = 1} \qquad \mathbf{x = 3/2}$

ಅದೇ ರೀತಿ ಪ್ರಯತ್ನಿಸಿ

1) $6x^2 - x - 2 = 0$
2) $2x^2 + 3x - 7 = 0$
3) $4x^2 - 5x - 6 = 0$

**ಸೂತ್ರ ವಿಧಾನದಿಂದ ವರ್ಗ ಸಮೀಕರಣ ಬಿಡಿಸುವುದು**

**(ಈ ವರ್ಷದ ಪಠ್ಯಕ್ಕೆ ನೀಡಿರುವುದಿಲ್ಲ)**

$$x = \frac{-b \pm \sqrt{b^2 - 4ac}}{2a}$$

ಆದರೆ ಮೂಲಗಳ ಸ್ವಭಾವನ್ನು ತಿಳಿಯಲು ಈ ಮುಂದಿನ ಸೂತ್ರ ಕಲಿಯಿರಿ $\Delta = b^2 - 4ac$ ($\Delta$ ಡೆಲ್ಟಾ ಎಂದು ಓದಿ)

$\Delta = 0$ ಎರಡು ಸಮ ಮತ್ತು ವಾಸ್ತವ ಮೂಲಗಳು

$\Delta < 0$ ಯಾವುದೇ ವಾಸ್ತವ ಮೂಲಗಳಿಲ್ಲ

$\Delta > 0$ ಎರಡು ವಿಭಿನ್ನ ಮತ್ತು ವಾಸ್ತವ ಮೂಲಗಳು

ಈ ಕೆಳಗಿನ ಸಮೀಕರಣದ ಶೋಧಕದ ಬೆಲೆ ಕಂಡುಹಿಡಿದು ಮೂಲಗಳ ಸ್ವಭಾವವನ್ನು ಬರೆಯಿರಿ.

1) $2x^2 - 5x + 3 = 0$

$a = 2, \quad b = -5 \quad c = 3$

$\Delta = b^2 - 4ac$

$\Delta = (-5)^2 - 4 \times 2 \times 3$

$\Delta = 25 - 24$

$\Delta = 1 > 0$ ಎರಡು ವಿಭಿನ್ನ ಮತ್ತು ವಾಸ್ತವ ಮೂಲಗಳು

ಅದೇ ರೀತಿ ಪ್ರಯತ್ನಿಸಿ

2) $2x^2 - 5x - 1 = 0$ 3) $x^2 + 3x + 2 = 0$

4) $4x^2 - 12x + 9 = 0$ 5) $x^2 + 4x + 4 = 0$

www.hampitimes.com - Hampi Times Margadarshi

ಮಾರ್ಗದರ್ಶಿ ಶಿಕ್ಷಕರು : **ಎಂ.ಎಸ್.ಮಂಜುನಾಥ,** ಶಿಕ್ಷಕರು, ಹಗರಿಬೊಮ್ಮನಹಳ್ಳಿ (ತಾ) ವಿಜಯನಗರ (ಜಿಲ್ಲೆ)

**ಸಾಯಿಮಣಿ ಪ್ರಕಾಶನ, ಹೊಸಪೇಟೆ**

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055